

ನೂಪುರ ಭ್ರಮರಿ
...ನರ್ತನ ಜಗತ್ತಿಗೊಂದು ಪರಿಭ್ರಮಣ

ಸಂಚಿಕೆಗಳಿಗೆ ಅನುದಾನವಿತ್ತವರು

# ಭಾರತೀಯ ಭಾಷಾ ಸಂಸ್ಥಾನ

# ಮಾನಸ ಗಂಗೋತ್ರಿ,

# ಮೈಸೂರು

Published with Financial Assistance from the Central Institute of Indian Languages

(Ministry of Human Resource Development, Department of Higher Education, Govt of India)

**Manasagangothri, Mysore-570006**

**Sanctioned vide letter 53-4(5)/2009-10/KAN/LM/GRNT dated June 18, 2010 Under the scheme of 'Grant in Aid'**

*Manasagangotri, Mysore–570006 sanctioned vide letter 53-4(5)/2009-10/KAN/LM/GRNT dated June 18, 2010 under the scheme of Grant-in-Aid".*

A Circumnavigation to the world of Dance and Performing Arts : A complete Bi-lingual Journal
RNI No :KARKAN/2009/29752

ನೂಪುರ ಭ್ರಮರಿ
...ನರ್ತನ ಜಗತ್ತಿಗೊಂದು ಪರಿಭ್ರಮಣ

ಶ್ರಾವಣ–ಭಾದ್ರಪದ 2010

ಸಂಪುಟ: 04 ಸಂಚಿಕೆ: –04

**ಸಂಪಾದಕರು:** ಮನೋರಮಾ. ಬಿ.ಎನ್
**ವೆಬ್‌ಸೈಟ್ ವಿನ್ಯಾಸ:** ಮಹೇಶ್ ಎಳ್ಯಡ್ಕ,
ಧ್ಯೇಯ ಸಾಫ್ಟ್‌ವೇರ್ ಸೊಲ್ಯುಷನ್ಸ್ ಪ್ರೈ.ಲಿ
**ವಿತರಣಾ ಮುಖ್ಯಸ್ಥ:** ವಿಷ್ಣುಪ್ರಸಾದ್ ನಿಡ್ಡಾಜೆ
**ಕಛೇರಿ ನಿರ್ವಹಣೆ:** ರಾಜ್‌ಗೋಪಾಲ್.ಬಿ.ಎನ್
**ಪ್ರಕಾಶನ:** 'ಸಾನಿಧ್ಯ', ಮಡಿಕೇರಿ
**ಪುಟ ವಿನ್ಯಾಸ:** ರಾಧೆ, ಬೆಂಗಳೂರು

## ಈ ಸಂಚಿಕೆಯಲ್ಲಿ....

## ವರ್ಷ-ವೈಭವ

ಅಂತರಂಗದೊಳಗೆ..
**ಮಂಜೀರ**.............................................. 04
**ದರ್ಶನ ಭ್ರಮರಿ :**
ಕರ್ನಾಟಕ ಕಲಾ ತಿಲಕ ನಾಟ್ಯಾಚಾರ್ಯ ಉಳ್ಳಾಲ ಮೋಹನ್..... 06
**ಲಲಿತ ಲಹರಿ :** ಆಶಯ.............................................. 15
**ನರ್ತನ ಸುರಭಿ :** ನೃತ್ಯ– ಅಂದು, ಇಂದು, ಮುಂದು................. 16
**ಹಸ್ತ ಮಯೂರಿ :** ಭ್ರಮರ ಹಸ್ತ.............................................. 18
ನಿಮ್ಮ ಬರೆಹ ನಮ್ಮ ಓದು.............................................. 19
**ರಂಗಸ್ಥಳ :**
ನಾವಡರ ಕಂಠಸಿರಿ ಮುಂಬಯಿಯಲ್ಲೂ ಮೋಡಿ ಮಾಡಿತ್ತು!....... 20
**ದರ್ಪಣ :** ನೃತ್ಯ ರಂಗದ ಅನಭಿಷಿಕ್ತ ರಾಣಿ : ರುಕ್ಮಿಣಿ............ 22
**ಒಳನೋಟ**.............................................. 25

All rights reserved. Reproduction in any manner, electronic or otherwise, in whole or in part without prior written permission is prohibited. Views and Opinions expressed by authors in the articles published in NOOPURA BHRAMARI are their own not of Noopura Bhramari.

Visit our website : **www.noopurabhramari.com**
for the latest news, views and other updates.

**ನೂಪುರ ಭ್ರಮರಿಗೆ ಲೇಖನ–ವಿವರ– ವಿಚಾರ– ಅಭಿಪ್ರಾಯ ಇತ್ಯಾದಿಗಳನ್ನು ಬರೆಯುವವರು ಪ್ರತೀ ಎರಡನೇ ತಿಂಗಳ 10ನೇ ತಾರೀಕಿನ ಒಳಗಾಗಿ ಕಳಿಸಬೇಕಾಗಿ ಕೋರಿಕೆ.**



## ಮಂಜೀರ

**ನ**ಮ್ಮಲ್ಲಿ ನಿರಂತರವಾಗಿ ಜಾಗೃತಗೊಳ್ಳುತ್ತಾ, ನಾವು ಬದುಕುವ ಬದುಕನ್ನು ಮತ್ತೊಮ್ಮೆ ನೋಡಿಕೊಳ್ಳಬೇಕು ಎಂದಾದಾಗ ನಮಗೆ ನೆರವಾಗುವುದೇ ಸೃಷ್ಟಿಶೀಲ ಮನಸ್ಥಿತಿ. ನಾವು ಕಾಣುತ್ತಿರುವ, ಅನುಭವಿಸುವ, ಆಲೋಚಿಸುವ ಒಂದು ಜಗತ್ತು ಅಥವಾ ವಸ್ತು ನಮ್ಮನ್ನು ಕಾಡುತ್ತದೆ ಎಂದಾದರೆ ಆ ವಸ್ತುವಿನೆಡೆಗೆ ಒಂದು ದೃಷ್ಟಿ, ಆಸಕ್ತಿ, ಸಂಬಂಧ ಬೆಳೆಯುತ್ತಾ ಹೋಗುತ್ತದೆ. ಅದನ್ನು ಹೇಳುವುದೇ ಸೃಷ್ಟಿಶೀಲತೆ ! ಅದು ಕೇವಲ ಹೊಸತೊಂದರ ಜನ್ಮವಷ್ಟೇ ಅಲ್ಲ, ಕಳಚಿಕೊಂಡುಹೋಗುವ ಕೊಂಡಿಯೊಂದರ ಮರುಜನ್ಮವೂ ಆಗಬಹುದು.

ಅಂತಹ ಸೃಷ್ಟಿಶೀಲತೆ ಕಾರ್ಯೋನ್ಮುಖವಾಗಿ ರೂಪುಗೊಂಡರೆ ಕ್ರಾಂತಿಯೆನಿಸುವ ಕಲ್ಪನೆಗಳು, ಕಾಣ್ಕೆಗಳು ಹೊರಬೀಳುತ್ತವೆ. ಉದಾ : ಯಾವುದೋ ಅನ್ಯಾಯವಾಗುತ್ತಿದೆ ಎಂದುಕೊಂಡಾಗ ಆ ಅನ್ಯಾಯದ ಬೆಂಕಿ ನಮ್ಮೊಳಗೇ ಕಾಟ ಕೊಟ್ಟು ಅದರ ಬಗ್ಗೆ ನಾವು ಬೇರೊಂದು ಅಭಿವ್ಯಕ್ತಿಯನ್ನು ತಾಳುತ್ತೀವಿ ಎಂದಾದರೆ ಅದು ಸೃಷ್ಟಿಶೀಲತೆ. ಆ ಅನ್ಯಾಯದ ವಿರುದ್ಧ ಕೆಲಸ ಮಾಡುತ್ತೀವಿ ಅಂತಾದರೆ ಅದು ಕ್ರಿಯಾಶೀಲತೆ, ಸೃಷ್ಟಿಶೀಲ ಮನಸ್ಥಿಯ ಉಗಮಕ್ಕೆ ಇಚ್ಛಾಶಕ್ತಿ, ಜ್ಞಾನಶಕ್ತಿಗಳ ಹರಿವು ಬೇಕು. ಅದೇ ಇಚ್ಛಾಶಕ್ತಿ, ಜ್ಞಾನಶಕ್ತಿ ಕ್ರಿಯಾಶಕ್ತಿಯಲ್ಲಿ ಸರಿಯಾದ ದಾರಿಯಲ್ಲಿ ಪ್ರತಿಫಲಿತವಾದರೆ ಮಾತ್ರ ಶಿಕ್ಷಣ. ಇವುಗಳೆಲ್ಲದರ ಒಟ್ಟು ದರ್ಶನವೇ ಪ್ರತಿಭೆ. ಅದರ ಕಾರ್ಯ ಕಲೆ. ಪ್ರತಿಭೆ ಸೃಷ್ಟಿಗೂ, ಸೃಷ್ಟಿಶೀಲತೆ ಪ್ರತಿಭೆಗೂ ಸಹಕಾರಿಯೂ, ಪೂರಕವೂ ಹೌದು.

ಈ ಪ್ರತಿಭೆಗೆ ವಿಶಿಷ್ಟವಾದ ಒಂದು ದೃಢತೆಯನ್ನೂ, ಪುಷ್ಟಿಯನ್ನೂ ನೀಡುವುದು ಪಾಂಡಿತ್ಯ. ಶತಾವಧಾನಿಗಳು ಹೇಳುವಂತೆ 'ಶುದ್ಧಪ್ರತಿಭೆಯನ್ನು ಜೋಗದ ಜಲಪಾತವೆನ್ನಬಹುದಾದರೆ ಪಾಂಡಿತ್ಯವು ಈ ಜಲಶಕ್ತಿಯನ್ನು ವಿದ್ಯುತ್ತಾಗಿ ಪರಿವರ್ತಿಸುವ ಯಂತ್ರರಾಶಿವಿಶೇಷ'. ಹೀಗೆ ಯಾವುದೇ ಪರಿಚ್ಛೇದಕ್ಕೆ ಒಳಗಾಗದ ಪ್ರತಿಭೆ ಮತ್ತು ದೇಶ-ಕಾಲ-ವಸ್ತುಗಳಿಂದ ಪರಿಚ್ಛಿನ್ನವಾದ ಪಾಂಡಿತ್ಯ ಒಂದಾಗಿ ಕಲೆತಾಗ ಮಾತ್ರ ಆನಂದಮಯ ಕಲಾಸೃಷ್ಟಿ ಸಾಧ್ಯ.

ಅಂತಹ ಪಾಂಡಿತ್ಯಪೂರ್ಣ ದೃಷ್ಟಿ, ಸೃಷ್ಟಿಶೀಲತೆ ಮತ್ತು ಕ್ರಿಯಾಶೀಲತೆಗಳ ಸಾಂಗತ್ಯದ ನಿಲುವು, ಪ್ರತಿಭೆಯ ಅರಿವು ಇಂದಿನ ನೃತ್ಯಕ್ಷೇತ್ರಕ್ಕೆ ಅಗತ್ಯವಿದೆ. ಅದು ಕೇವಲ ನೃತ್ಯ ಸಂಯೋಜನೆ, ಕಾವ್ಯ ಸಮಯ, ನೃತ್ಯ ಪ್ರದರ್ಶನಗಳಿಗಷ್ಟೇ ಸೀಮಿತವಾಗಬೇಕಿಲ್ಲ ; ಜೊತೆಗೆ ನೃತ್ಯಕ್ಷೇತ್ರದ ಬಗ್ಗೆ ಪರಿಚಯಿಸುವ, ಅನುಭವ-ಆಲೋಚನೆಯನ್ನು ಕಟ್ಟಿಕೊಡುವ, ಸುದೀರ್ಘ-ಸರಳ-ಆಸಕ್ತಿಕರ ಓದಿಗೆ ನೆರವಾಗುವ, ತಲೆಮಾರುಗಳ ತಹತಹಿಕೆ-ಸಂಬಂಧಗಳನ್ನು ವಿವರಿಸುವ, ಪೂರ್ಣ ಸಾದೃಶ್ಯ ವಿವರಗಳನ್ನು ಒದಗಿಸುವ, ಸರ್ಜನಶೀಲ (ಸೃಜನಶೀಲ-ವ್ಯಾಪಕವಾಗಿ ಬಳಸುವ ತಪ್ಪು ಪದ) ನೋಟಗಳನ್ನು- ಕ್ರಿಯಾಶೀಲ ಮನಸ್ಸುಗಳನ್ನು ಹೆಚ್ಚಿಸುವ, ಕಾಡುವ ಸಂವೇದನಾಶೀಲ ಪುಸ್ತಕಗಳು-ಗ್ರಂಥ ನಿರೂಪಣೆಗಳು ಹೊರಬರಬೇಕಾಗಿವೆ. ಆಗ ಮತ್ತಷ್ಟು ಪ್ರತಿಭೆಗಳು ವಿಕಸಿತಗೊಳ್ಳಲು, ಪ್ರಕಾಶಗೊಳ್ಳಲು, ಪ್ರಯೋಗವಾಗಲು, ಪಸರಿಸಲು, ಪೂರ್ಣವೆನಿಸಲು ಸಾಧ್ಯ.

ಕನ್ನಡದಲ್ಲಿ ಪ್ರಕಾಶಿತವಾದ ಬಹಳಷ್ಟು ನೃತ್ಯ ಸಂಬಂಧೀ ಪುಸ್ತಕಗಳು ಕೇವಲ

ಪರೀಕ್ಷಾ ಕ್ರಮಕ್ಕಷ್ಟೇ ಮೀಸಲಾಗಿವೆ ಎಂಬಂತಿದೆ. ಕೇವಲ ಬೆರಳೆಣಿಕೆಯಷ್ಟು ಪುಸ್ತಕಗಳು ನೈಜವೆನಿಸುವ ಸಂಶೋಧನೆಗಳನ್ನು, ಸ್ವಂತಿಕೆಯ ವಿವರಗಳನ್ನು ಒದಗಿಸುತ್ತವೆಯಾದರೂ, ಕಾರಣಾಂತರಗಳಿಂದ ಲಭ್ಯವಾಗುತ್ತಿಲ್ಲ. ಉಳಿದಂತೆ ಬಹಳಷ್ಟು ಕೃತಿಗಳು ಮತ್ತೊಬ್ಬರ ಜೇಬಿಗೆ ಕೈ ಇಳಿಬಿಟ್ಟಂತ ಚೌರ್ಯವೆನಿಸದ ಚೌರ್ಯಗಳೇ ಆಗಿವೆ.

ಪುಸ್ತಕಗಳ ಕೊರತೆಯಿದ್ದಷ್ಟು ಅರಿವಿನ ಬೆಳಕಿಂಡಿ ದೂರವಾಗುತ್ತಲೇ ಹೋಗುತ್ತದೆ ; ಚೈತನ್ಯದ ದೃಷ್ಟಿ, ಆಳವೆನಿಸುವ ಅಧ್ಯಯನ, ಮರುನೋಟದ ಅವಕಾಶವೂ ಕುಸಿಯುತ್ತದೆ. ವ್ಯಾಪ್ತಿಯ ಅನುಭವವೂ ಕಡಿಮೆಯಾಗುವುದಲ್ಲದೆ ಕ್ಷೇತ್ರವೊಂದರ ಅನುಕೂಲ–ಅನನುಕೂಲ, ಅವಶ್ಯಕತೆ–ಅವಸ್ಥೆ, ಗತಿ–ನೆಲೆ, ಕೊಂಕು–ಕೊಳಕು–ಕಳಂಕ–ತೊಡಕು, ಸಾಧ್ಯತೆ, ಪ್ರತಿಭೆ, ಪರಿಣಾಮಗಳು ಅಷ್ಟಾಗಿ ಲಕ್ಷ್ಯಕ್ಕೆ ಬರುವುದಿಲ್ಲ. ಇದರಿಂದ ಕಲೆಯ ಭೂತಕಾಲದಲ್ಲಿದ್ದ ಶಾಸ್ತ್ರ–ಸಂಪ್ರದಾಯ, ವರ್ತಮಾನಗಳಲ್ಲಿ ಅವುಗಳ ಪ್ರಸ್ತುತತೆ–ವಾಸ್ತವಗಳಷ್ಟೇ ಅಲ್ಲ ; ಭವಿಷ್ಯದ ವಿಮರ್ಶೆಗಳು, ಚಿಂತನೆಗಳ ಗುಣಮಟ್ಟ ಅರಿವಿಗೆ ಬರಲಾರದು.

ಪುಸ್ತಕಗಳು ಭವಿತವ್ಯಕ್ಕೆ ನಾವು ನೀಡುವ ಅತುತ್ತಮ ಕೊಡುಗೆ. ಈ ನಿಟ್ಟಿನಲ್ಲಿ ಅಧ್ಯಯನ ನಡೆಸುವವರ ಮತ್ತು ಅಧ್ಯಯನದ ಫಲಶ್ರುತಿಯನ್ನು ಸರಿಯಾದ ದಿಕ್ಕಿನಲ್ಲಿ ಕಾಣಿಸುವವರ ಶ್ರಮ ಹೆಚ್ಚಿನ ಬದಲಾವಣೆಗಳನ್ನು ತರಲು ಸಾಧ್ಯ. ವೈಯಕ್ತಿಕ ನೆಲೆಯಲ್ಲಿ, ಸಂಸ್ಥೆ–ಸಂಘಟನೆಗಳ ಪ್ರಯತ್ನದೊಂದಿಗೆ ಅಕಾಡೆಮಿಗಳ, ಸರ್ಕಾರ ಪ್ರಾಯೋಜಿತ ಸಂಸ್ಥೆ– ಇಲಾಖೆಗಳ ನೆರವು, ಮುಂದಾಳತ್ವ, ಮಾರ್ಗದರ್ಶನ ಮತ್ತು ಮುನ್ನಡೆ ಅಗತ್ಯ ಬೇಕು. ಇನ್ನಾದರೂ ಇಂತಹ ಪುನಶ್ಚೇತನಗಳಿಲ್ಲವಾದಲ್ಲಿ ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ಇರುವ ಕೊಂಡಿಯು ಶಿಥಿಲವಾಗುತ್ತದೆ ; ಅರಿವಿನ ಕ್ಷಿತಿಜ ಬರಿದಾಗುತ್ತದೆ ; ಕೈಮರ ಕಾಣೆಯಾಗುತ್ತದೆ ; ಪ್ರಕ್ಷುಬ್ಧ ಪರಿಸ್ಥಿತಿ ಪುನರಾವರ್ತನೆಗೊಳ್ಳುತ್ತದೆ ; ನಿರ್ವಾತ ತುಂಬಿಕೊಳ್ಳುತ್ತದೆ. ಅರಿವಿನ ದೀವಟಿಗೆಗೆ ಪುಸ್ತಕಗಳ ಪ್ರಕಾಶನ, ಮತ್ತು ಅದರಿಂದ ಪ್ರಯೋಜನ ಪಡೆದುಕೊಳ್ಳಬೇಕಾದ ವಿವೇಕ ನಮ್ಮಲ್ಲಿ ಇದ್ದರೆ ಮಾತ್ರ ಕಲಾದಿಗಂತ ನಿರ್ಮಲವಾಗಿ, ಸಮೃದ್ಧವಾಗಿ ಶೋಭಿಸಬಹುದು. ಆ ದಿಕ್ಕಿಗೆ ನಮ್ಮ ಪ್ರಯತ್ನವಿರಲಿ.

**ಪ್ರೀತಿಯಿಂದ**

**☯ ಸಂಪಾದಕರು**

**ಆತ್ಮೀಯ ಓದುಗರೇ/ ಕಲಾವಿದ ಮಿತ್ರರೇ,**
**ನೃತ್ಯದ ಕುರಿತಂತೆ ಸಂಶೋಧನೆಯೊಂದಕ್ಕೆ ನಿಮಗೆ ತಿಳಿದಂತೆ ಇರುವ ಮಾಹಿತಿಗಳು ಬೇಕಾಗಿದೆ. ಭಾರತೀಯ ಶಾಸ್ತ್ರೀಯ ನೃತ್ಯಗಳ ಪೈಕಿ (ಯಕ್ಷಗಾನವನ್ನೂ ಸೇರಿಸಿದಂತೆ) ಸಾಮಾಜಿಕ ಕಳಕಳಿಯನ್ನಿಟ್ಟುಕೊಂಡು ಸಾಮಾಜಿಕ ಸಮಸ್ಯೆಗಳ ಬಗ್ಗೆಯೋ, ಅಥವಾ ನಿಶ್ಚಿತ ವ್ಯವಸ್ಥೆಯ ಕುರಿತು ಅರಿವು, ಪ್ರಜ್ಞೆ ಮೂಡಿಸುವ ನಿಟ್ಟಿನಲ್ಲಿ ಕೈಗೊಂಡ ಪ್ರದರ್ಶನ/ ಸಂಯೋಜನೆ/ ನೃತ್ಯ/ ರೂಪಕಗಳ ವಿವರಗಳಿದ್ದರೆ ಪತ್ರಿಕೆಯ ವಿಳಾಸಕ್ಕೆ ಕಳುಹಿಸಿಕೊಡಿ. ನಿಮ್ಮ ಸಹಕಾರವನ್ನು ಸ್ಮರಿಸಲಾಗುವುದು.**




**ಕ**ರ್ನಾಟಕ ಕಲಾತಿಲಕ ಶ್ರೀಯುತ ಉಳ್ಳಾಲ ಮೋಹನ್ ಕುಮಾರ್ ಅವರ ಹೆಸರನ್ನು ಕೇಳದವರು ಯಾರು? ದಕ್ಷಿಣ ಕರಾವಳಿಯ ಭರತನಾಟ್ಯ ಪರಂಪರೆಯಲ್ಲಿ ಅವರ ಹೆಸರಿಲ್ಲದಿದ್ದರೆ ಅದು ಅಪೂರ್ಣವೆನಿಸುವಷ್ಟರ ಮಟ್ಟಿಗೆ ನೃತ್ಯ ಕ್ಷೇತ್ರದ ನಾಡಿಮಿಡಿತವಾಗಿದ್ದಾರೆ. ಇಂದಿಗೆ ದಕ್ಷಿಣ ಕನ್ನಡದಲ್ಲಷ್ಟೇ ಅಲ್ಲದೆ ಕರ್ನಾಟಕ, ಹೊರರಾಜ್ಯಗಳಲ್ಲಿ ಖ್ಯಾತರಾಗಿರುವ ಸುಮಾರು 100ಕ್ಕೂ ಮಿಗಿಲು ನೃತ್ಯ ಶಿಕ್ಷಕರು-ಗುರುಗಳು ಉಳ್ಳಾಲ ಮೋಹನ್ ಕುಮಾರ್ ಅವರ ಗರಡಿಯಲ್ಲಿ ಪಳಗಿ ದೊಡ್ಡವರಾದವರೇ ಹೌದು. ಮಂಗಳೂರಿನ ಉಳ್ಳಾಲದ ಕೋಲ್ಯ ಕೋಟೆಕಾರ್‌ನಲ್ಲಿ ನೆಲೆಸಿರುವ ಶ್ರೀಯುತರು; ತಮ್ಮ ಸಂಸ್ಥೆ ನಾಟ್ಯನಿಕೇತನದ ಮೂಲಕವಾಗಿ ಅದೆಷ್ಟೋ ನೃತ್ಯಾಸಕ್ತ ಹೃದಯಗಳಲ್ಲಿ ಜಾಗೃತಿಯನ್ನು ಮೂಡಿಸಿದವರು. ಮಂಗಳೂರಿನ ಭರತನಾಟ್ಯ ಸಂಸ್ಕೃತಿಗೊಂದು ರೂಪ ತಂದಿತ್ತವರಲ್ಲಿ ಇವರೂ ಒಬ್ಬರಾಗಿದ್ದು; ನೃತ್ಯ ಪರಂಪರೆಯಲ್ಲಿ ಮಂಗಳೂರಿಗೆ ಸ್ಥಾನವನ್ನು ದಕ್ಕಿಸಿಕೊಟ್ಟು ಮೇಲ್ಪಂಕ್ತಿ ಹಾಕಿಕೊಟ್ಟವರು.

ಹಲವು ನೃತ್ಯ ರೂಪಕ, ನೃತ್ಯಬಂಧಗಳನ್ನು ಸಂಯೋಜಿಸಿರುವ ಮೋಹನ್ ಕುಮಾರ್ ಅವರದ್ದು ಇಳಿವಯಸ್ಸಿನಲ್ಲೂ ಬಳಲದ, ಚಟುವಟಿಕೆಯುಳ್ಳ ಕ್ರಿಯಾಶೀಲ ವ್ಯಕ್ತಿತ್ವ. ಹಲವು ನೃತ್ಯ ಸಂಸ್ಥೆಗಳ, ಅಕಾಡೆಮಿಗಳ ಮಾರ್ಗದರ್ಶಿಯಾಗಿ, ಪರೀಕ್ಷಾ ಮಂಡಳಿ, ಪಠ್ಯಕ್ರಮ ಮಂಡಳಿಯ ಸದಸ್ಯರಾಗಿ, ಮೌಲ್ಯಮಾಪಕರಾಗಿ, ಪರೀಕ್ಷಕರಾಗಿ, ಸಂಯೋಜಕರಾಗಿ ದುಡಿದಿರುವ ಇವರು

**ದಕ್ಷಿಣ ಕನ್ನಡದ ನೃತ್ಯಪರಂಪರೆಯಲ್ಲಿ ಪ್ರತ್ಯಕ್ಷವಾಗಿ ಮತ್ತು ಅವರ ಶಿಷ್ಯರ ಮೂಲಕವಾಗಿ ಆಳವಾದ ಬೇರುಗಳನ್ನು ಹರಡಿಸಿದವರು. ಅವರ ನಾಟ್ಯನಿಕೇತನ ಸುವರ್ಣ ವರ್ಷಗಳ ದಾಖಲೆಯನ್ನು ಮೀರಿ ಮುನ್ನಡೆದಿದ್ದು, ಅವರ ಮಗಳು, ಶಿಷ್ಯೆ ವಿದುಷಿ ರಾಜಶ್ರೀ ತಮ್ಮ ತಂದೆಯ ಪರಂಪರೆಯ ಮುಂದಿನ ನೋಟಗಳಿಗೆ ಕೊಂಡಿಯಾಗಿದ್ದಾರೆ. 1989ರಲ್ಲಿ ಮಂಗಳೂರಿನಲ್ಲಿ ನಡೆದ ಸನ್ಮಾನದಲ್ಲಿ ಅಮೃತ ಸೋಮೇಶ್ವರ ಅವರ ಸಂಪಾದಕತ್ವದಲ್ಲಿ ನಾಟ್ಯಮೋಹನ ಎಂಬ ಅಭಿನಂದನಾ ಕೃತಿ ಹೊರಬಂದಿದೆ. ಹಲವು ಗುರು ಅಭಿವಂದನೆಗಳು, ಹೆಮ್ಮೆಯ ರಂಗಪ್ರವೇಶಗಳು, ಖ್ಯಾತ ಪುರಸ್ಕಾರ–ಸಮ್ಮಾನಗಳು ಅವರ ಮುಡಿಗೇರಿವೆ. ಅವರ ನೋಟ–ನಿಲುವುಗಳಿಗೆ ಸಾಕ್ಷಿಯಾಗಿ ಈ ಸಂ'ದರ್ಶನ' ನಿಮ್ಮೆದುರಿಗಿದೆ.**

> **ಭರತನಾಟ್ಯವೆಂದರೆ ಸಹಜ ಭಾವ. ನಮ್ಮ ನಿತ್ಯದ ಜೀವನಕ್ಕೆ ಬಹಳಷ್ಟು ಸಮೀಪದ್ದು ಭರತನಾಟ್ಯ. ಇದನ್ನು ಕಲಿತರೆ ಉಳಿದ ಕಲೆಗಳನ್ನು ಕಲಿಯಲು ಸುಲಭ. ಆದರೆ ಭರತನಾಟ್ಯದಲ್ಲಿ ಭರತನಾಟ್ಯವೇ ಇರಬೇಕು. ಅದೇ ಸಹಜ**

**• ನೀವು ಕಲಿಯುವ ಕಾಲದ ಮನಸ್ಥಿತಿ ಹೇಗಿತ್ತು?**

ಕಲಿಯುವ ಆಕಾಂಕ್ಷೆ ಹೆಚ್ಚು. ಅದರಂತೆಯೇ ಕಷ್ಟವೂ ಕೂಡಾ. ಆಗ ವಿದ್ಯಾಭ್ಯಾಸ ಎಂದರೆ ಉದ್ಯೋಗಕ್ಕಾಗಿ ಮಾತ್ರ ಅಲ್ಲ. ವಿಠಲ ಮಾಸ್ಟ್ರು ನನ್ನ ಮೊದಲ ಗುರು. ನಂತರ ರಾಜರತ್ನಂ ಪಿಳ್ಳೈ ಅವರಲ್ಲಿ ಕಲಿಕೆ. ಆಗ ಅವರು ಕಲಾಮಂಡಲಂನಿಂದ ಹೊರಬಂದು ಲಲಿತ ಕಲಾ ಸದನದಲ್ಲಿ ಕಲಿಸ್ತಾ ಇದ್ದರು. ನಂತರದ ದಿನಗಳಲ್ಲಿ ಅವರ ಆಶೀರ್ವಾದದಿಂದಲೇ ತರಗತಿ ಪ್ರಾರಂಭಿಸಿದೆ.

ಹಾಗಂತ ಹಿಂದಿನದ್ದೆಲ್ಲ ಒಳ್ಳೆಯದು ಅಂತ ಅಲ್ಲ. ಈಗಿನದ್ದು ಕೆಟ್ಟದ್ದೂ ಅಲ್ಲ. ದೇವದಾಸಿಗಳು ರಾಜರನ್ನು ಮೆಚ್ಚಿಸಲು ಮಾಡಿದ ರೀತಿಯಲ್ಲಿ ನಾವಿಂದು ಮಾಡಬಾರದು. ಆಯಾಯ ಕಾಲದಲ್ಲಿ ಎಷ್ಟು ಒಳ್ಳೆಯದಾಗಿದೆಯೋ ಅಷ್ಟೇ ಕೆಟ್ಟದ್ದೂ ಆಗಿದೆ.

**• ಇಂದಿನ ಭರತನಾಟ್ಯಕ್ಕೆ ಎಂತಹ ಬದಲಾವಣೆ ಸೂಕ್ತ ಎಂಬುದು ನಿಮ್ಮ ಅಭಿಪ್ರಾಯ?**

ಇಂದು ಎಲ್ಲದರಲ್ಲೂ ಅನುಕರಣೆಯಿದೆ. ಉದಾ: ವರ್ಣ, ಪದ, ಜಾವಳಿ, ಕೀರ್ತನೆಗಳಾದಿಯಾಗಿ ಎಲ್ಲದಕ್ಕೂ ತಟ್ಟುಮೆಟ್ಟು ಅಭಿನಯ. ಇದು ಕೂಚಿಪುಡಿಯ ಅನುಕರಣೆ. ಭರತನಾಟ್ಯದ ಸಹಜತೆಗೆ ಧಕ್ಕೆ. ಕೆಲವೊಂದು ನೃತ್ಯನಾಟಕಗಳಿಗೆ ಬದಲಾವಣೆ ಬೇಕು ನಿಜ. ಆದರೆ ಫ್ಯೂಷನ್ ಎನುತ್ತಾ ಏನೇನೋ ಅಬದ್ಧ ಮಾಡಿದರೆ ಅದು ನೃತ್ಯಕ್ಕೆ ಮಾಡುವ ಅನ್ಯಾಯವಲ್ಲದೇ ಬೇರೇನಲ್ಲ!

ಅಷ್ಟೇ ಏಕೆ, ಅರಂಗೇಟ್ರಂ– ಗುರುವಿನ ಬಳಿ ಕಲಿತ ಬಳಿಕ ಸಮಾಜದ ವಿದ್ವಾಂಸರ ಎದುರಲ್ಲಿ ನೃತ್ಯ ಪ್ರದರ್ಶನ ಮಾಡುವುದು ಮೊದಲಿನಿಂದಲೂ ಬೆಳೆದು ಬಂದಿರುವ ಸಂಸ್ಕೃತಿ. ಆದರೆ ಇಂದು ಅದೊಂದು ತಾಕತ್ತು ಎಂಬಂತಾಗಿದೆ. ಸಿಕ್ಕಾಪಟ್ಟೆ ಖರ್ಚು ಮಾಡಿ ಮದುವೆಗಿಂತಲೂ ಭರ್ಜರಿ ಪ್ರವೇಶ ಮಾಡಿಸುತ್ತಾರೆ. ಇದಕ್ಕೆ ತದ್ವಿರುದ್ಧವಾಗಿ ಕೆಲವರು ಮದುವೆಯಾದ ನಂತರ ನರ್ತಿಸುವುದನ್ನು ಸಂಪೂರ್ಣ ಬಿಟ್ಟುಬಿಡುತ್ತಾರೆ! ಕ್ರಮೇಣ



ಸುದ್ದಿಯೇ ಇಲ್ಲದಂತೆ ಅಡಗಿಹೋಗುತ್ತಾರೆ.

ಹಾಗಾಗಿ ಮೊದಲು ಗುರುವಿಗೆ ವಿದ್ಯಾರ್ಥಿಯ ಪ್ರತಿಭೆ ಸಮಾಧಾನ ಕೊಡಬೇಕು. ಏನಿಲ್ಲವೆಂದರೂ ಅರಂಗೇಟ್ರಂ ಮಾಡಲು 18 ವರ್ಷ ಆದರೂ ವಿದ್ಯಾರ್ಥಿಗೆ ಆಗಿರಬೇಕು. ಚಿಕ್ಕ ಮಕ್ಕಳಿಗೆ ರಂಗಪ್ರವೇಶ ಮಾಡಿಸುವುದು ನಿಜಕ್ಕೂ ವ್ಯರ್ಥ.

**• ಇಂದಿನ ನೃತ್ಯಬಂಧಗಳಲ್ಲಿ ಅನಪೇಕ್ಷಿತ ಬೆಳವಣಿಗೆಗಳೇನಾದರೂ ಇವೆಯೇ?**

ಹುಂ. ಇಂದಿನ ಪರೀಕ್ಷೆಗಳಲ್ಲಿ ವರ್ಣ, ಪದಂಗಳ ತುಂಬಾ ವಿರಹ ಭಾವವೇ ಜಾಸ್ತಿಯಾಗಿದೆ. ಶಬ್ದಂನಲ್ಲಿ ವಿರಹ ಭಾವ ಶುರುವಾಯಿತೆಂದರೆ ವರ್ಣ, ಪದ, ಜಾವಳಿ, ತಿಲ್ಲಾನ ಎಲ್ಲದರಲ್ಲೂ ವಿರಹವೇ! ಅಂದು ದೇವದಾಸಿಗಳು ಹೆಚ್ಚಾಗಿ ವಿರಹ ಶೃಂಗಾರವನ್ನೇ ಮಾಡ್ತಾ ಇದ್ರು ಎಂದ ಮಾತ್ರಕ್ಕೆ ಈಗಲೂ ಅದನ್ನೇ ಮುಂದುವರೆಸಿದರೆ ಹೇಗೆ? ಉದಾ: ಕೆಲವು ಅಷ್ಟಪದಿಗಳನ್ನು ಕಲಿಸಲಿಕ್ಕಾಗೋದಿಲ್ಲ. ಹಾಗಂತ ಅವುಗಳು ಕೀಳು ಮಟ್ಟದ್ದು ಎಂಬ ಅಭಿಪ್ರಾಯವಲ್ಲ; ಬದಲಾಗಿ ಪಾಠ ಮಾಡುವಾಗ ಅದರ ಸಾಹಿತ್ಯಕ್ಕೆ ಅಭಿನಯ ಸಮಾಜದ ಮತ್ತು ನೋಡುಗರ ದೃಷ್ಟಿಯಿಂದ ಔಚಿತ್ಯಪೂರ್ಣವೆನಿಸದು. ಅಷ್ಟಪದಿ ಪವಿತ್ರವಾದರೂ ಅದಕ್ಕಿಂತಲೂ ಮಿಗಿಲಾಗಿ ನಾಟ್ಯವು ವೇದ ಎಂಬುದು ನಮ್ಮ ಮನಸ್ಸಿನಲ್ಲಿರಬೇಕು.

ಚಿಕ್ಕ ಮಕ್ಕಳಿಗೆ ವಿರಹ ಭಾವ ಕಲಿಸುವುದು ಸರಿಯಲ್ಲ. ಭಕ್ತಿ ಭಾವ ಬೇಕಾದ್ರೆ ಮಾಡಲಿ. ಅದೇ ವಾತ್ಸಲ್ಯ ಶೃಂಗಾರವೋ, ವಿರಹ ಶೃಂಗಾರವೋ ಮಾಡಿದರೆ ಹೇಗೆ? ಸಣ್ಣ ಹುಡುಗಿ ಅಲೈಪಾಯುದೇ ಮಾಡಿದರೆ ಅವಳಿಗೆ ಅದರ ಶೃಂಗಾರ ಮನೋಧರ್ಮ ಅರ್ಥವಾದೀತೇ? ಹತ್ತು ವರ್ಷದ ಹುಡುಗಿ 'ಮನ್ಮಥನ ಬಾಣ ಚುಚ್ಚಿತು' ಎಂದು ಮಾಡಿದರೆ ಗಿಳಿಪಾಠವಲ್ಲದೆ ಮತ್ತೇನು? ತಮಗೆ ಅರ್ಥವಾಗದ್ದನ್ನು ಯಾವತ್ತೂ ಮಾಡಬಾರದು. ಮಾಡಿದರೂ ಅದು ಸಹಜವೆನಿಸುವುದಿಲ್ಲ. ಹಾಗಾಗಿ ಅಂತಹ ಶೃಂಗಾರವನ್ನು, ಪ್ರಬುದ್ಧರೆನಿಸಿಕೊಂಡವರು, ಮದುವೆಯಾದವರು ಅವರವರ ಅನುಭವಕ್ಕೆ ಸಮಂಜಸವಾಗಿ ಕಲಿಯುವುದು, ಮಾಡುವುದು ಒಳ್ಳೆಯದು.

> **ಇಂದಿನ ಬಹಳಷ್ಟು ರಂಗಪ್ರವೇಶಗಳು ಎಲ್ಲವನ್ನೂ ಮಿಕ್ಸ್ ಮಾಡಿಕೊಳ್ಳುತ್ತವೆ. ಶಾಸ್ತ್ರೀಯ ನೃತ್ಯ ರಂಗಪ್ರವೇಶವೆಂದು ಎಲ್ಲವನ್ನೂ ಅರ್ಥಂಬರ್ಥ ಮಾಡುತ್ತಾರೆ. ತಟ್ಟೆಯಿಟ್ಟು ಕುಣಿದು ಭರತನಾಟ್ಯವೆಂದು ತೋರಿಸುತ್ತಾರೆ. ಅದಕ್ಕೆ ಸರಿಯಾಗಿಯೋ ಎಂಬಂತೆ ತಟ್ಟೆ ಇಟ್ಟ ಕೂಡಲೇ ಭಯಂಕರ ಚಪ್ಪಾಳೆ. ಈ ಬಗೆಯ ಅಳವಡಿಕೆ ಸಹಜತೆಗೆ ಕೊಡಲಿಪೆಟ್ಟು**

**• ಅಭಿನಯ ಸ್ವರೂಪ ಹೇಗಿದ್ದರೆ ಚೆನ್ನ?**

ಅಭಿನಯ ಹೇಳಿಕೊಟ್ಟು ಬರುವಂತದ್ದಲ್ಲ. ನಾಯಕಿ ಭಾವದಲ್ಲೂ ಒಂದರಿಂದ ಒಂದಕ್ಕೆ ಸಂಬಂಧ ಇದೆ. ಗುರುಗಳು ಸಾಮಾನ್ಯವಾಗಿ ಯಾವುದೇ ನೃತ್ಯ ಮಾಡಬೇಕಾದರೂ

ನೆಗಾಡುತ್ತ, ಹಸನ್ಮುಖಳಾಗಿ ಮಾಡಬೇಕು ಅಂತ ಹೇಳಿಕೊಟ್ಟಿರುತ್ತಾರೆ. ಹಾಗೆಂದು 'ಕರಿರಾಜ ಕಷ್ಟದಲ್ಲೂ ಆದಿಮೂಲ' ಎನ್ನುವ ದುಃಖ ಭಾವಕ್ಕೂ ನಗಾಡುತ್ತಲೇ ನರ್ತಿಸಿದರೆ ಅದನ್ನು ಅಭಿನಯವೆನ್ನುವುದಾದರೂ ಹೇಗೆ? ರಸಪ್ರತಿಪಾದನೆಯೆನ್ನುವುದು ಸುಮ್ಮನೆ ಅಲ್ಲ; ವೇದಿಕೆಯಲ್ಲಿರುವಾಗಲೇ ತನ್ನಿಂತಾನೇ ಭಾವ ಸೃಷ್ಟಿ ಮಾಡುವಷ್ಟು ತಾಕತ್ತು ಕಲಾವಿದನಿಗಿರಬೇಕು. ಸಂಗೀತದಲ್ಲಿ ಸ್ವರ ಪ್ರಸ್ಥಾರ ಮಾಡಿದಂತೆ ನೃತ್ಯದಲ್ಲಿ ರಸ ಭಾವಾಭಿನಯ ಬರಬೇಕು. ಸ್ವಂತವಾಗಿ ಬಂದರೆ ಮಾತ್ರ ಅದು ಪ್ರತಿಭೆ.

> **ನಮ್ಮಲ್ಲಿ ಮ್ಯಾಜಿಕ್‌ಗಳನ್ನು ಮಾಡುವವರಿದ್ದಾರೆ. ಆದರೆ ಮ್ಯಾಜಿಕ್ ಅಷ್ಟೇ ನೃತ್ಯವಲ್ಲ. ರಾಗಗಳಿಗೆ ಅನುಸಾರವಾಗಿ ಅಭಿನಯವನ್ನು ತರುವ ಶಕ್ತಿ ಕಲಾವಿದನಲ್ಲಿ ಇರಬೇಕು**

**• ಭರತನಾಟ್ಯದ ಅಭಿವ್ಯಕ್ತಿಗೆ ಯಾರು ಸೂಕ್ತ? ಪುರುಷನೋ? ಮಹಿಳೆಯೋ?**

ಲಾಸ್ಯಕ್ಕೆ ಹೆಂಗಸರ ಅಭಿವ್ಯಕ್ತಿಯೇ ಬೇಕು. ಗಂಡಸರಿಗೆ ತಾಂಡವ ಒಪ್ಪುವಷ್ಟು ಲಾಸ್ಯ ಒಪ್ಪುವುದಿಲ್ಲ. ಭರತನಾಟ್ಯದಲ್ಲಿರೋದು ಸ್ತ್ರೀತ್ವ. ಹುಡುಗಿಯರ ಲಾಸ್ಯದ ದೃಷ್ಟಿ ಹುಡುಗರು ಎಷ್ಟೇ ಮಾಡಿದರೂ ಬರುವುದಿಲ್ಲ. ಅದರಲ್ಲೂ ನಾಯಕಿ ಭಾವಗಳನ್ನು ಮಾಡಿದರೆ ಹೇಸಿಗೆಯೆನಿಸುತ್ತದೆ. ಹಾಗಂತ ಹುಡುಗರು ಭರತನಾಟ್ಯ ಕಲಿಯಬಾರದು ಅಂತಲ್ಲ; ಹಾಗಾಗಿ ಕಲಿಯಬೇಕಾದ್ದನ್ನೆಲ್ಲಾ ಕಲಿಯಲೇಬೇಕು. ಅದರಲ್ಲೂ ಗುರುಗಳೆನಿಸಿಕೊಂಡವರಲ್ಲಿ ಬಹುಪಾಲು ಮಂದಿ ಪುರುಷರೇ ಆಗಿದ್ದಾರೆ. ವಿದ್ಯಾರ್ಥಿಗಳಿಗೆ ಕಲಿಸಬೇಕಾದರೆ ಮಾಡಿ, ಮಾಡಿಸಿ ತೋರಿಸಲಿಕ್ಕಾದರೂ ಎಲ್ಲದ ಜ್ಞಾನ ಇರಬೇಕಲ್ಲವೇ? ಆದರೆ ಪ್ರದರ್ಶನದ ವೇಳೆಗೆ ಹುಡುಗರಿಗೆ ಒಪ್ಪುವುದನ್ನು ಹುಡುಗರೇ ಮಾಡಬೇಕು. ಹುಡುಗಿಯರಿಗೆ ತಕ್ಕುದಾದದ್ದನ್ನು ಹುಡುಗಿಯರೇ ಮಾಡಬೇಕು.

ಹಾಗಂತ ಪುರುಷರಿಗೆ ಸ್ತ್ರೀ ಸಹಜ ಅಭಿನಯ ನರ್ತನದ ಸಾಮರ್ಥ್ಯ ಇಲ್ಲವೆಂದೂ ಅಲ್ಲ. ಆದರೆ ಅಂಥವರು ಸಾವಿರದಲ್ಲೊಬ್ಬರು. ಉದಾ: ಕೂಚಿಪುಡಿಯ ವೇದಾಂತಂ ಸತ್ಯನಾರಾಯಣ ಶರ್ಮ. ಅಂತೆಯೇ ಯಕ್ಷಗಾನದಲ್ಲೂ ಕಲಾವಿದರಿದ್ದಾರೆ. ಆದರೆ ಅದು ದೇಸೀ ಪದ್ಧತಿ. ಏಕವ್ಯಕ್ತಿ ಯಕ್ಷಗಾನದಲ್ಲಿನ ಲಾಸ್ಯವೂ ಸ್ತ್ರೀಯರನ್ನೇ ನಾಚಿಸುವಷ್ಟರ ಮಟ್ಟಿಗೆ ಪ್ರಭಾವಶಾಲಿ. ಅದು ಅವರವರ ಸೃಷ್ಟಿಶೀಲತೆ ಮತ್ತು ಪ್ರತಿಭೆ. ಆದರೆ ಭರತನಾಟ್ಯ ಮಾರ್ಗೀ ಪದ್ಧತಿಯದ್ದು. ಅವರಂತೆಯೇ ನಾವೂ ಇಲ್ಲಿ ಮಾಡಬೇಕು ಅಂದರೆ ಸಾಧ್ಯವಿಲ್ಲವೆನಿಸುತ್ತದೆ.

**• ಭರತನಾಟ್ಯವನ್ನು ಕಾಡುತ್ತಿರುವ ದೋಷಗಳು ಯಾವುವು?**

ಇಂದು ಎಲ್ಲರೂ ವಿದುಷಿಗಳೇ ಆಗಿಹೋಗಿದ್ದಾರೆ. ಶಿಕ್ಷಕಿಯರೆನಿಸಿಕೊಂಡವರು ಗುರುಗಳಾಗಿದ್ದಾರೆ. ವೇದಿಕೆಗಳಲ್ಲಿ ಕುಣಿಸಿ ಹಣ ಗಳಿಸಬೇಕು ಎನ್ನುವ ಗುರಿಯೇ ಹೆಚ್ಚು; ಗೂಡಂಗಡಿ ಇಡುವ ವಿದ್ಯಾರ್ಥಿಗಳೇ ಜಾಸ್ತಿ. ಗುರುಗಳು ಯಾವಾಗ, ಹೇಗೆ ಆಗುತ್ತಾರೆ ಎಂಬ



ಪ್ರಶ್ನೆ ನಮ್ಮಲ್ಲಿಲ್ಲ. ಕಡಿಮೆಯೆಂದ್ರೂ 15 ವರ್ಷ ಗುರುಗಳಾಗಿ ಪರಿಶ್ರಮವಿರಬೇಕು. ಈ ಕ್ಷೇತ್ರದ ಒಳಹೊರಗು ತಿಳಿದವರಿರಬೇಕು. ಹೇಗ್ಹೆಗೋ ಪಾಸು ಮಾಡಿ ಕ್ಲಾಸು ಪ್ರಾರಂಭ ಮಾಡಿದವ್ರು ಇಂದು ಗುರುಗಳಾಗುತ್ತಿದ್ದಾರೆ. ಎಲ್ಲರೂ ಕಲಿಸಲಿಕ್ಕೆ ಪ್ರಾರಂಭಿಸಿದರೆ ಶಿಕ್ಷಣ ಆಗುತ್ತದಾ? ಇಂದು ಕಲೆಗಾಗಿ ಕಲಿಯುವವರು ಯಾರಿದ್ದಾರೆ? ಇದರಿಂದಾಗಿಯೋ ಏನೋ ಇಲ್ಲಿನ ವಿದುಷಿಗಳಿಗೆ ತಮಿಳ್ನಾಡಿನಲ್ಲಿ ಬೆಲೆ ಇಲ್ಲ. ಅಲ್ಲಿ ಈ ತರಹದ ಪ್ರಮೇಯವೂ ಇಲ್ಲ. ಹಾಗಾಗಿಯೇ ಇಂದು ಭರತನಾಟ್ಯ ಎಂದಾಕ್ಷಣ ವಿದ್ವಾಂಸರು ನೋಡುವುದು ತಮಿಳ್ನಾಡನ್ನೇ!

**• ಅಂದರೆ, ಕರ್ನಾಟಕದಲ್ಲಿನ ಭರತನಾಟ್ಯ ಕಲಿಕೆ ಮತ್ತು ಪರೀಕ್ಷಾ ಕ್ರಮ ಎಡವಿದೆ ಎನ್ನುತ್ತೀರಾ?**

ಈಗಂತೂ ನಮ್ಮಲ್ಲಿನ ಪ್ರಾಥಮಿಕ ಅಭ್ಯಾಸವೇ ಚೆನ್ನಾಗಿರೋದಿಲ್ಲ. ಸಾಕಷ್ಟು ಲಾಬಿಯೂ ನಡೀತಿದೆ. ಪರೀಕ್ಷೆಯ ಹೆಸರು ಹೇಳಿಕೊಂಡು ಶಿಕ್ಷಕರು ಹಣ ಕೀಳೋದು ಹೆಚ್ಚಾಗುತ್ತಿದೆ. ವಿದ್ವತ್ತು ಪರೀಕ್ಷೆಗಳಲ್ಲಿ ಎಷ್ಟೋ ಅಪಚಾರಗಳಾಗುವುದೂ ಇದೆ. ಪರೀಕ್ಷೆಗೆ ಸರಿಯಾದ ಪರೀಕ್ಷಕರು ಬರ್ತಾ ಇಲ್ಲ ಅನ್ನೋದು ದೊಡ್ಡ ಕೊರಗು. ಇದಕ್ಕೆ ಪೂರಕವಾಗಿ ಪರೀಕ್ಷೆಯ ಸಂಭಾವನೆಯ ಸಮಸ್ಯೆ ಇಂದು ನಿನ್ನೆಯದಲ್ಲ.

ನೃತ್ಯ ಸಂಗೀತದ ಪ್ರಾಥಮಿಕ ಜ್ಞಾನವಿಲ್ಲದ ಜನರು ಪರೀಕ್ಷಕರಾಗಿರುವುದನ್ನು ಕಂಡಿದ್ದೇನೆ. ಪರೀಕ್ಷಕರು ಬಾರದೇ ಇದ್ದರೆ ಅವರವರ ಊರಿನಲ್ಲಿ ಇರುವ ಶಿಕ್ಷಕರನ್ನು, ಗುರುಗಳನ್ನು ಪರೀಕ್ಷಕರನ್ನಾಗಿಸುವುದಂತೂ ನಿರಂತರ ಬೆಳೆದು ಬಂದಿದೆ. ಅಂತಹ ಸಂದರ್ಭದಲ್ಲಿ ಪರೀಕ್ಷಾರ್ಥಿಗಳು ಅಂತಹ ಪರೀಕ್ಷಕರ ಶಿಷ್ಯರೇ ಆಗಿರುತ್ತಾರೆ.

> **ಲವ್ ಮಾಡುವುದೇ ಬೇರೆ, ಶೃಂಗಾರವೇ ಬೇರೆ. ಎರಡೂ ಒಂದೇ ಅಲ್ಲ ಎಂಬ ತಿಳಿವಳಿಕೆ ಶಿಕ್ಷಕರಾದಿಯಾಗಿ ಶಿಷ್ಯರಲ್ಲೂ ಬರಬೇಕು**

ಅದರಲ್ಲೂ ಪರೀಕ್ಷಕರದ್ದು ಮೌಲ್ಯಮಾಪನ ಮಾಡುವ ಹೊಣೆಗಾರಿಕೆಯೇ ಹೊರತು ವಿನಾಕಾರಣ ವಿದ್ಯಾರ್ಥಿಗಳನ್ನು ದೂಷಿಸುವುದು, ಹೆಚ್ಚುಗಾರಿಕೆ ತೋರಿಸುವುದು, ಅವರ ಮೇಲೆ ಅಭಿಪ್ರಾಯಗಳನ್ನು ಹೇರುವುದು ಒಳ್ಳೆಯದಲ್ಲ. ಹಲವು ಬಾರಿ ಪರೀಕ್ಷೆಗಳಲ್ಲಿ ದೊಡ್ಡ ದೊಡ್ಡದಾಗಿ ಮಾತಾಡಿ ಬಿಂಕ ತೋರಿಸುವ ಕಲಾವಿದರು ತಾವು ಪ್ರದರ್ಶನ ಕೊಡುವ ಹಣೆಬರಹ ನೋಡಿದರೆ ದೇವರೇ ಕಾಪಾಡಬೇಕೆನ್ನಿಸುತ್ತದೆ.

ಸಂಗೀತದಲ್ಲಿ ಪ್ರಕೃತಿ ಸ್ವರ ಯಾವುದು, ವಿಕೃತಿ ಸ್ವರ ಯಾವುದು ಎಂದೇ ಗೊತ್ತಿಲ್ಲದವರು ಸಂಗೀತ ನೃತ್ಯ ಪರೀಕ್ಷೆಗಳಲ್ಲಿ ನಿರ್ಣಯಕಾರರಾಗಿದ್ದನ್ನು ನೋಡಿದ್ದೇನೆ. ಇಂತವರು ಬಂದ್ರೆ ಯಾವುದು ಮೌಲ್ಯಯುತ ಎಂದು ಅಳೆಯುವುದಾದರೂ ಹೇಗೆ? ಕೆಲವೊಮ್ಮೆ ಅಭ್ಯರ್ಥಿಗೆ ಹೆಚ್ಚಿನ ಅಂಕ ಹಾಕುವ ಒತ್ತಾಯಗಳು ಪರೀಕ್ಷಕರಿಗೆ ಬರುತ್ತವೆ. 40 ಅಂಕವಿದ್ದವರಿಗೆ ಬೇಕಾದರೆ ಎರಡಂಕ ಜಾಸ್ತಿ ಹಾಕಬಹುದೇನೋ; ಆದರೆ 10 ಅಂಕವಿದ್ದವರಿಗೆ 40 ಅಂಕ ಮಾಡಬೇಕೆನ್ನುವುದು ನ್ಯಾಯವೇ? ಇದರಿಂದಾಗಿ ಹಲವು ಬಾರಿ ಉತ್ತಮವಾಗಿ ನರ್ತಿಸುವ ವಿದ್ಯಾಥಿಗಳಿಗೇ ಕಡಿಮೆ ಅಂಕಗಳು ಬರುತ್ತವೆ.

ಪ್ರಾಥಮಿಕ ಪರೀಕ್ಷೆಗೆ ಕುಳಿತ ವಿದ್ಯಾರ್ಥಿಗಳನ್ನು ಪಾಸು ಮಾಡಬೇಕು ಎಂಬ

ಅಘೋಷಿತ ಪ್ರವೃತ್ತಿ ಬೆಳೆದಿದೆ. ಹಾಗಾದರೆ ಪರೀಕ್ಷೆಗೆ ಯಾಕೆ ಕುಳಿತುಕೊಳ್ಳಬೇಕು; ಫೇಲ್ ಮಾಡ್ತಾರ್ದು ಅಂತಾದ್ರೆ ಯಾರು ಬೇಕಾದ್ರೂ ಹೋಗಿ ಸುಮ್ಮನೆ ನಿಲ್ಬೋದಲ್ವಾ? ಇದರಿಂದ ಮನುಷ್ಯರಿರಲಿ; ಯಾವುದೇ ಪ್ರಾಣಿಯನ್ನೂ ಪಾಸು ಮಾಡಬಹುದು ಎಂಬ ಭಾವನೆ ಬೆಳೆದಿದೆ. ಇನ್ನಾದರೂ ಕಾಯಕಲ್ಪ ಮಾಡದಿದ್ದರೆ ಭವಿಷ್ಯದಲ್ಲಿ ಉತ್ತಮ ಬದಲಾವಣೆ ನಿರೀಕ್ಷಿಸುವುದೂ ಸಾಧ್ಯವಿಲ್ಲ. ಇತ್ತೀಚೆಗೆ ಪರೀಕ್ಷಾ ಮಂಡಳಿ ಕೆಲವೊಂದು ಕಾನೂನನ್ನು ಮಾಡಿರುವುದು ಒಳ್ಳೆಯ ಬೆಳವಣಿಗೆ.

**ಭರತ ಮಕ್ಕಳಿಗೆ ಶಾಪ ಕೊಟ್ಟನೆಂಬ ನಂಬಿಕೆಯಿದೆಯಲ್ಲವೇ? ಅದು ಬೇರಾರು ಅಲ್ಲ. ಈಗಿನ ಕಲಾವಿದರಾದ ನಾವೇ!**

**• ಪಠ್ಯಕ್ರಮದಲ್ಲಿ ಏನಾದರೂ ಸುಧಾರಣೆ ಅಗತ್ಯವಿದೆಯೇ?**

ಜೂನಿಯರ್, ಸೀನಿಯರ್, ವಿದ್ವತ್ ಪಠ್ಯಗಳಲ್ಲಿ ಒಂದೊಂದಕ್ಕೂ ಸಂಬಂಧವಿಲ್ಲ ಅಂತಾಗಿದೆ. ಜೊತೆಗೆ ಪಠ್ಯ ರಚಿಸುವವರು ತಮ್ಮ ತಮ್ಮ ಸಂಪ್ರದಾಯದ ಪ್ರಕಾರ ಪಠ್ಯ ರೂಪಿಸಿದರೆ ಕಲಿಯುವ ಮಕ್ಕಳು ಕಷ್ಟಪಡುತ್ತಾರೆ. ಉದಾ: ಉಪ ಅಡವುಗಳು ಮುಖ್ಯ ಅಡವುಗಳ ಆಧಾರದಲ್ಲೇ ಇರಬೇಕು. ಆಗಲೇ ಅದಕ್ಕೆ ಚೆಂದ, ಆನಂದ. ಇಲ್ಲದೇ ಹೋದರೆ ರೇಖಾ ವಿನ್ಯಾಸ ಸಾಧಿತವಾಗುವುದಾದರೂ ಹೇಗೆ? ಆದರೆ ತಮ್ಮದೇ ಶೈಲಿ ಊರವರ ಶೈಲಿ ಆಗಬೇಕು ಅನ್ನುವ ಲೋಭವಿದ್ದರೆ ಏನು ಮಾಡೋಣ? ಯಾವ ಶೈಲಿಯೇ ಆದರೂ ಅಂಗ ರೇಖಾವಿನ್ಯಾಸ ಸರಿಯಾಗಿರಬೇಕಲ್ವಾ? ಸೊಲ್ಕಟ್ಟ್ ಸಾಹಿತ್ಯಗಳಿಗೆ ಸರಿಯಾಗಿ ಮಾಡುವುದೇ ಮುಖ್ಯ ಅಲ್ವೇ?

**• ಪ್ರಶಸ್ತಿ–ಪುರಸ್ಕಾರ ಮತ್ತು ವಿಮರ್ಶೆಗಳ ಮಟ್ಟ ಹೇಗಿದೆ?**

ಇಂದಿನ ಹಲವು ಪ್ರಶಸ್ತಿಗಳು ಅರ್ಹತೆಗಿಂತಲೂ ಹೆಚ್ಚಾಗಿ ಶಿಫಾರಸ್ಸುಗಳನ್ನೇ ಅವಲಂಬಿಸಿದೆ. ಪ್ರಶಸ್ತಿ, ಅಭಿನಯ ಸರಸ್ವತಿ, ನಾಟ್ಯರಾಣಿ ಶಾಂತಲೆ ಎಂಬ ಅಭಿದಾನಗಳೆಲ್ಲಾ ಚಿಕ್ಕ ವಯಸ್ಸಿಗೆ ಒಲಿಯಬೇಕು ಎಂಬ ಹಠ ಪೋಷಕರದ್ದು. ಆದರೆ ಮಕ್ಕಳಿಗೆ ಚಿಕ್ಕಂದಿನಿಂದಲೇ ಪ್ರಶಸ್ತಿ ಪುರಸ್ಕಾರಗಳ ಅಮಲು ಹತ್ತಿಸಿದರೆ ಅದೇ ಅವರ ಆಸಕ್ತಿಯಾಗುತ್ತದೆಯೇ ವಿನಾ ನೃತ್ಯ ವಾಗುವುದಿಲ್ಲ. ಗುರುಗಳಲ್ಲೂ ಕೂಡಾ ತಮ್ಮಿಂದ ವಿದ್ಯಾರ್ಥಿಗಳು ಒಳ್ಳೆಯ ದಾರಿಯಲ್ಲಿ ಮುನ್ನಡೆದರೆ ಅದುವೇ ಪ್ರಶಸ್ತಿಯೆಂದು ಭಾವಿಸುವವರು ಕಡಿಮೆ.



ಈಗೀಗ ವಿಮರ್ಶೆಗಳನ್ನು ಏನೂ ಗೊತ್ತಿಲ್ಲದವರು ಬರೆಯುತ್ತಾರೆ. ಅನುಭವ ಇಲ್ಲದವರೂ ಬರೆಯುತ್ತಾರೆ. ಎ ಯಿಂದ ಝಡ್ ವರೆಗೆ ಎಲ್ಲವೂ ಸರಿ ಎಂದೇ ಆಗಿದೆ.

ಸಾಮಾನ್ಯ ಪೇಕ್ಷಕರು ಚೆನ್ನಾಗಿದೆ ಅನ್ನೋದಕ್ಕೂ, ವಿದ್ವಾಂಸರ ಪ್ರಶಂಸೆಗೂ ವ್ಯತ್ಯಾಸವಿದೆ ಯಲ್ವೇ? ಹಾಗಂತ ಯಾರೂ ಆಲೋಚನೆ ಮಾಡುವುದಿಲ್ಲ.

> **ಭರತನಾಟ್ಯ ನಾಟ್ಯದ ಅಂಶಗಳಿಗಿಂತಲೂ ನೃತ್ಯದ ಅಂಶಗಳನ್ನೇ ಹೆಚ್ಚು ಅಳವಡಿಸಿಕೊಂಡಿದೆ ಎಂಬ ಮಾತು ತಪ್ಪೇನಲ್ಲ. ಪದ್ಮಾ ಸುಬ್ರಹ್ಮಣ್ಯಂ ಅವರೂ ಈ ಅಂಶವನ್ನೇ ವಾದಿಸುತ್ತಾರೆ. ಅವರ ಮನೋಧರ್ಮ ಪ್ರಬಲವಾದದ್ದು. ಅವರು ಭರತನೃತ್ಯವೆಂದೇ ಭರತನಾಟ್ಯವನ್ನು ಕರೆಯುತ್ತಾರೆ. ಅಂತೆಯೇ ನಡೆದುಕೊಳ್ಳುತ್ತಾರೆ ಕೂಡಾ ! ಹಾಗೆಂದು ಅವರನ್ನೇ ಉಳಿದವರೂ ಅನುಕರಿಸಿದರೆ ಅದು ಅವರವರ ಅಭಿವ್ಯಕ್ತಿಗೆ ಒಪ್ಪೀತೇ ಎಂಬುದು ಯೋಚಿಸಿ ಕಂಡುಕೊಳ್ಳಬೇಕು**

**•ಇದಕ್ಕೆಲ್ಲಾ ಮುಖ್ಯ ಯಾರು ಕಾರಣ ಅಂತೀರಿ?**

ಈಗ ಜನರಲ್ಲಿ ದುಡ್ಡು ತುಂಬಾ ಆಗಿದೆ. ಸ್ಪರ್ಧೆಯಲ್ಲಿ ಫಸ್ಟ್ ಬರ್ಬೇಕು, ಪೇಪರ್‌ನಲ್ಲಿ ಹಾಕಬೇಕು ಎನ್ನುವ ಮನಸ್ಸು; ಫಲವಾಗಿ ವಿದ್ಯಾರ್ಥಿಗಳ ಕೈಯಲ್ಲಿ ಒದ್ದಾಡುವ ಗುರುಗಳೂ ಇದ್ದಾರೆ. ಆದರೆ ಮಕ್ಕಳ ಬೆಳವಣಿಗೆ ಅಲ್ಲಿಗೇ ಕುಂಠಿತವಾಗುವುದೆಂಬ ಪರಿಜ್ಞಾನವೂ ಇರುವುದಿಲ್ಲ. ಒಟ್ಟಾರೆ ನೃತ್ಯವೆಂದರೆ ಪೋಷಕರಿಗೂ ಪ್ರತಿಷ್ಠೆಯ ಸಾಧನ. ಪರೀಕ್ಷೆ, ಸ್ಪರ್ಧೆಗಳಲ್ಲಿ ತಮ್ಮ ಮಕ್ಕಳೇ ಮೊದಲಿಗರಾಗಬೇಕು ಎನ್ನುವುದೇನೋ ಒಳ್ಳೆಯದೇ! ಆದರೆ ಅದು ಲೋಭವಾಗಬಾರದು.

ಅಂತೆಯೇ ದುಡ್ಡು ಕೊಡ್ತಾರೆ ಅಂತ ಪರೀಕ್ಷೆಗೆ ಕಟ್ಟಿಸಿ ಪಾಸು ಮಾಡುವುದು ಗುರುಗಳಿಗೆ ಒಳ್ಳೆಯದಲ್ಲ. ಎಲ್ಲವನ್ನೂ ಸರಿ ಮಾಡ್ಲಿಕ್ಕೆ ಆಗೋದಿಲ್ಲ; ನಿಜ. ಆದರೆ ಗುರುಗಳು ಸ್ವಲ್ಪವಾದರೂ ಮಟ್ಟವನ್ನು ಕಾಯ್ದುಕೊಳ್ಳುವ, ಉಳಿಸುವ ಶಕ್ತಿ ಕಂಡುಕೊಂಡರೆ ಒಳ್ಳೆಯದಾಗಬಹುದು. ಅಷ್ಟು ಮಾತ್ರವಲ್ಲ, ಕೆಲವು ಗುರು(?)ಗಳಿಗೆ ಶಿಷ್ಯರಲ್ಲಿ ತಾರತಮ್ಯ ನೋಡುವ ಪ್ರವೃತ್ತಿ ಇದೆ. ದುಡ್ಡಿರೋವ್ರು ಎಂದು ಹೆಚ್ಚಿನ ಒತ್ತು ಕೊಡೋದು, ಪಾಸು-ಫೇಲ್ ಮಾಡೋದು ಸಾಮಾನ್ಯವೆನಿಸಿದೆ.

**• 'ಭರತನಾಟ್ಯ ಸಾಮಾನ್ಯರಿಗೆ ಅರ್ಥವಾಗುವುದಿಲ್ಲ' ಎಂಬ ಆರೋಪ ಇದೆಯಲ್ವಾ? ಭಾಷೆಯು ಕಲೆಯ ಸಂವಹನಕ್ಕೆ ತೊಡಕಾಗುತ್ತದೆಯೇ?**



'ಭರತನಾಟ್ಯ ನಮ್ಮಂತವರಿಗೆ ಅರ್ಥವಾಗುವುದಿಲ್ಲ' ಅನ್ನುತ್ತಾರಲ್ಲಾ ; ಕೇರಳದ ಕಥಕಳಿ ಹೇಗೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಜನಪ್ರಿಯವಾಯಿತು– ಅರ್ಥವಾಯಿತು? ಹಾಗಾದರೆ ಭರತನಾಟ್ಯವನ್ನು ಹಿಂದಿಯಲ್ಲಿ ಮಾಡಿದರೆ ಅರ್ಥವಾಗುತ್ತಾ ? ತ್ಯಾಗರಾಜರ ಕೀರ್ತನೆಯನ್ನು ಕನ್ನಡದಲ್ಲಿ ಮಾಡಿ ಅಂದ್ರೆ ಅದರ ಗುಣಮಟ್ಟಕ್ಕೆ ಏರಲು ಸಾಧ್ಯವೇ ? ಕಥಕಳಿ, ಕೂಚಿಪುಡಿಯನ್ನು ಕನ್ನಡದಲ್ಲಿ ಮಾಡಿ ಅಂದರೆ ಹೇಗೆ ಸಾಧ್ಯ ? ಅರ್ಥವಾಗುವುದಿಲ್ಲ

ಅನ್ನೋದೆಲ್ಲಾ ಸುಳ್ಳು. ಜನರಿಗೆ ಅರ್ಥವಾಗುತ್ತದೆ. ಕಲಾವಿದನಿಗೆ ಸರಿಯಾಗಿ ಅಭಿವ್ಯಕ್ತಿಸಲು ಬರೋದಿಲ್ಲ ಅಂದ್ರೆ ಜನರಿಗೆ ಅರ್ಥವಾಗೋದಿಲ್ಲ ಎಂಬ ಆರೋಪ ಹೊರಿಸುತ್ತಾರೆ. ಹಾಗಂತ ಜನರಿಗೆ ಅರ್ಥವಾಗದ್ದು ಮಾಡಬೇಕೆಂದು ಹೇಳುವುದಲ್ಲ.

ಹಾಗೊಂದು ವೇಳೆ ಜನರಿಗೆ ಅರ್ಥ ಮಾಡಿಸಲಿಕ್ಕೆ ಅಂತೇನಾದರೂ ಹೊರಟರೆ ಸಾಹಿತ್ಯಿಕವಾಗಿ ಮಾಡುವುದು ಹೇಗೆ? ಯಕ್ಷಗಾನವನ್ನು ತಮಿಳಲ್ಲಿ ಮಾಡಬಹುದು; ಆದರೆ ಕನ್ನಡದಷ್ಟು ಶಕ್ತಿಯುತವಾಗಿರುವುದಿಲ್ಲ ಎನ್ನುವುದು ಎಲ್ಲರಿಗೂ ಗೊತ್ತು.ಅದಕ್ಕೆ ಅದರದ್ದೇ ಆದ ಸೊಗಡು ಇರುತ್ತದೆ. ಉದಾ : ನಮ್ಮದೇ ಸಂಯೊಜನೆಯಲ್ಲಿ ಮೂಡಿಬಂದ ಏಳುವೆರ್ ದೆಯ್ಯರ್. ಅದು ತುಳುವಿನಲ್ಲಿದೆ. ಕನ್ನಡದಲ್ಲಿ ಸಪ್ತ ಮಾತೃಕೆಯರು ಎಂದೂ ಮಾಡಿದ್ದೇವೆ. ಆದರೆ ತುಳುವಿನಷ್ಟು ಪ್ರಭಾವಶಾಲಿಯಾದುದಲ್ಲ.

ಅದರಲ್ಲೂ ಈಗೀಗ ನಾಯಕಿಭಾವ ಇಲ್ಲದ ಎಷ್ಟೋ ವರ್ಣಗಳು ಇವೆ. ಇಂದಿನ ಕನ್ನಡ ವರ್ಣಗಳಲ್ಲಂತೂ ನಾಯಕಿ ಭಾವವೂ ಸರಿಯಾಗಿರುವುದಿಲ್ಲ. ಅದರಲ್ಲೂ ವರ್ಣಗಳ ಮಟ್ಟ ಗಮನಾರ್ಹವಾಗಿ ಇಳಿದಿದೆ. ಸಂಯೋಜನೆಗಳು ಕೂಡಾ ತಾಳ-ಲಯ-ಪಾಠಾಕ್ಷರಗಳಿಗೆ ಸಮವಾಗಿರುವುದಿಲ್ಲ. ವರ್ಣ ವರ್ಣದ ಹಾಗೇ ಇರಬೇಕು. ಅರ್ಥವಾಗುವುದಿಲ್ಲ ಎನ್ನುತ್ತಾ ಸರಳೀಕರಿಸುವುದು ಯಾಕೆ? ಬೇಕಾದರೆ ಸಣ್ಣದು ಮಾಡಿಕೊಂಡು ಸಮಯಕ್ಕೆ ಅನುಕೂಲವಾಗಿ ಒಂದಷ್ಟು ಹೊಂದಾಣಿಕೆ ಮಾಡಬಹುದು. ಆದರೆ ಏನನ್ನು ಮಾಡುತ್ತೇವೆಯೋ ಅದನ್ನು ಸರಿಯಾಗಿ ಮಾಡಬೇಕು. ಸಂಗೀತ ಕಚೇರಿ ಎಂಬಂತೆ ನಾವು ನೀಡುವ ನೃತ್ಯ ಪ್ರದರ್ಶನ ನಾಟ್ಯ ಕಚೇರಿ ಎನ್ನುವುದು ಅರ್ಥವಾಗಬೇಕು.

**● ಎಂತಹ ಬೆಳವಣಿಗೆ ನಮ್ಮ ಭರತನಾಟ್ಯ ನಾಟ್ಯಕ್ರಮಕ್ಕೆ ಬೇಕು? ನಿಮ್ಮ ಸಲಹೆಗಳೇನು?**

ಸರಿಯಾಗಿ ನಟುವಾಂಗ ಮಾಡುವವರು, ಅದರ ಜ್ಞಾನ ಇರುವವರು ಹೆಚ್ಚಾಗಬೇಕಿದೆ. ಇಲ್ಲದಿದ್ದರೆ ವೈಯಕ್ತಿಕ ನಾಟ್ಯ ಕಚೇರಿ ಯಾವಾಗ ಉಳಿಯುವುದು? ಗುರುಗಳೇ ನಟುವಾಂಗ ಮಾಡಬೇಕು ಅಂತೇನಿಲ್ಲ. ಆದರೆ ಹಾಡುವವರಿಗೆ ನಟುವಾಂಗ ಯಾವತ್ತೂ ಕಿರಿಕಿರಿ ಮಾಡಬಾರದು ಎಂಬುದು ನಟ್ಟುವನ್ನಾರ್‌ಗಳಿಗೆ ಗೊತ್ತಿರಬೇಕಿದೆ.

ನಮ್ಮಲ್ಲಿನ ದೇವಸ್ಥಾನಗಳಲ್ಲಿ ಶಾಸ್ತ್ರೀಯ ಸಂಗೀತ  ನೃತ್ಯಗಳಿಗೆ ಅವಕಾಶ ಎಂದು ಕಡ್ಡಾಯ ಮಾಡಿಸಬೇಕು. ಅದನ್ನ ಬಿಟ್ಟು ಆರ್ಕೆಸ್ಟ್ರಾ ಮಾಡಿಸಿದರೆ ಹೇಗೆ? ಈಗೀಗ ಸಂಗೀತ ನೃತ್ಯ ಕಾರಕ್ರಮವೆಂದರೆ ಅಷ್ಟಬಂಧ-ಬ್ರಹ್ಮಕಲಶ, ವಾರ್ಷಿಕೋತ್ಸವಗಳಲ್ಲಿ ಮೊದಲು ಎರಡು ಭಕ್ತಿ ಸಂಗೀತ, ನಂತರ ಫಿಲ್ಮ್ ಹಾಡಿಗೆ ಡ್ಯಾನ್ಸ್ ಮಾಡುವುದು ಎಂದೇ ಆಗಿಹೋಗಿದೆ. ಆರ್ಕೆಸ್ಟ್ರಾ ಹಾಕಿ ಡ್ಯಾನ್ಸ್ ಮಾಡುವುದು ಮಾಮೂಲಿಯೆನಿಸಿದೆ.

**ಆಯಾಯ ಕ್ರಮಗಳಲ್ಲಿ ಆಯಾಯ ಶೈಲಿಗಳನ್ನು ಮುಂದುವರೆಸಿಕೊಂಡು ಹೋಗುವುದು ಎಲ್ಲದಕ್ಕೂ ಉತ್ತಮ. ಅದರಲ್ಲೂ ಮೂಗೂರು, ಮೈಸೂರು ಶೈಲಿಗೆ ಇತ್ತೀಚೆಗೆ ಅಸ್ತಿತ್ವವೇ ಇಲ್ಲದಂತಾಗಿದೆ**

ಕೇರಳದ ದೇವಸ್ಥಾನಗಳಲ್ಲಿ ಸಂಗೀತ ನಾಟ್ಯಕ್ಕೆ ಫಂಡ್ ಇದೆ. ಆದರೆ ನಮ್ಮ ರಾಜ್ಯದಲ್ಲಿ ಪ್ರತೀ ದೇವಸ್ಥಾನದಲ್ಲೂ ಮಕ್ಕಳಿಂದ ಉಚಿತ ಕಾರ್ಯಕ್ರಮ ಕೊಡಿಸೋದು ಜಾಸ್ತಿ ಆಗಿದ್ದೆ.

ಹಾಗಾಗಿ ಕಲಾವಿದರಿಗೆ ಸಂಭಾವನೆಯ ಮಟ್ಟವೂ ಕುಸಿಯುತ್ತಿದೆ. ಹೊರಗಿನ ರಾಜ್ಯದ ಕಲಾವಿದರಿಗೆ ಸಿಗುವ ರಾಜ ಮರ್ಯಾದೆ, ಇಲ್ಲಿನವರಿಗೆ ಇಲ್ಲವೆಂಬಂತಾಗುವುದೇ ಹೀಗೆ ! ಗೌರವವನ್ನಿಟ್ಟುಕೊಳ್ಳಲಿಕ್ಕೆ ಬಾರದೆ ಹೋದರೆ ಮತ್ತೆ ದೂರುವುದರಲ್ಲಿ ಅರ್ಥವಿಲ್ಲ.

ನೃತ್ಯ ಸಂಗೀತಗಳಿಗಾಗಿ ಹೊಸ ಪರಿಷತ್, ಸಂಸ್ಥೆ ಅಂತ ಆಗಾಗ ಮಾಡುತ್ತಲೇ ಇರುತ್ತಾರೆ ; ನಿರ್ಣಯಗಳನ್ನು ಕೈಗೊಳ್ಳುತ್ತಾರೆ. ಆದರೆ ಅದರ ಹಿಂದಿನ ಕಾರ್ಯ ತತ್ಪರತೆ, ಜವಾಬ್ದಾರಿ, ಸೌಹಾರ್ದ ಸಂಬಂಧಗಳನ್ನು ಮರೆಯುತ್ತಾರೆ. ಹಳೆಯ ದೇವಸ್ಥಾನಕ್ಕೆ ಜೀರ್ಣೋದ್ಧಾರ ಮಾಡದೆ ಹೊಸತು ದೇವಸ್ಥಾನ ಕಟ್ಟಿ ಬ್ರಹ್ಮಕಲಶ ಮಾಡುವುದು ಏತಕ್ಕೆ? ಯಕ್ಷಗಾನ ಮತ್ತು ಜಾನಪದ ಅಕಾಡೆಮಿ ಪ್ರತ್ಯೇಕವಾದ ಹಾಗೆ ಸಂಗೀತ ನೃತ್ಯಕ್ಕೂ ಪ್ರತ್ಯೇಕ ಅಕಾಡೆಮಿಯೆನ್ನುವುದು ರೂಪುಗೊಂಡರೆ ಒಳ್ಳೆಯದು ಎನ್ನುವುದು ನನ್ನ ಅನಿಸಿಕೆ.

- **ಸೋದರ ಕಲೆಗಳ ಕಲಿಕೆ ಯಾವ ಮಟ್ಟದಲ್ಲಿದ್ದರೆ ಸೂಕ್ತ ?**

ಸೋದರ ಕಲೆಗಳನ್ನೂ ಕಲಿಯಬೇಕು. ಆದರೆ ಒಂದು ವಿಷಯವನ್ನು ಸರಿಯಾಗಿ ಕಲಿತ ಮೇಲಷ್ಟೇ ಉಳಿದುದರ ಬಗ್ಗೆ ಗಮನ ಹರಿಸಬೇಕು. ಆಗ ಮಾತ್ರ ಅದನ್ನೂ ಅರಗಿಸಿಕೊಳ್ಳಲಿಕ್ಕಾದೀತು.ಆಲದ ಮರ ಬೆಳೆಯೋದಕ್ಕೆ ಮುಂಚೆ ತಾಯಿಬೇರನ್ನು ಗಟ್ಟಿ ಮಾಡಿಕೊಳ್ಳುತ್ತದೆ. ಅಂತೆಯೇ ನಮ್ಮ ತಾಯಿಬೇರನ್ನು ನಾವು ಗಟ್ಟಿ ಮಾಡಿಕೊಳ್ಳಬೇಕು.



* ವಸ್ತುನಿಷ್ಟವೆಂದು ಮಕ್ಕಳಿಗೆ ಕಟು ವಿಮರ್ಶೆ ಮಾಡಿ ನೋಯಿಸಬಾರದು. ವೇದಿಕೆಗಳಲ್ಲಿ ಪ್ರೋತ್ಸಾಹಕವಾಗಿ ಮಾತನಾಡಬೇಕಾಗುತ್ತದೆ; ಬರೆಯುವಾಗ ನೋಡಿ ಅನುಭವಿಸಿ ಬರೆಯಬೇಕು.

* ಕೆಲವು ಮಕ್ಕಳು ಪ್ರತಿಭಾವಂತರಾಗಿರುತ್ತಾರೆ; ಕೆಲವರು ಪೆದ್ದರಾಗಿರುತ್ತಾರೆ. ಆದರೆ ಗುರುಗಳು ತಾಳ್ಮೆಯಿಂದ ಕಲಿಸಬೇಕು. ಗುರು ಎನ್ನುವುದಕ್ಕೆ ಬಹಳ ಉನ್ನತವಾದ ಸ್ಥಾನವಿದೆ.

* ಇಂದು ನೃತ್ಯದ ಮಟ್ಟ ಜಾಸ್ತಿ ಆಗಿದೆ. ಒಳ್ಳೆಯ ಬೆಳವಣಿಗೆಗಳಾಗಿವೆ. ದೇವದಾಸಿಗಳು ಮಾಡುತ್ತಿದ್ದ ರೀತಿಯಲ್ಲಿ ಪರಿಷ್ಕಾರಗಳಾಗಿ ವೈಜ್ಞಾನಿಕವಾಗಿದೆ. ರೇಖೆಯ ಮೇಲೆ ಅಡವುಗಳ ವಿನ್ಯಾಸಗಳಾಗಿವೆ. ರುಕ್ಮಿಣೀ ದೇವಿ ಅರುಂಡೇಲ್, ಕೃಷ್ಣ ಅಯ್ಯರ್ ಅವರ ಪರಿಶ್ರಮ ನಿಜಕ್ಕೂ ನಾವೆಲ್ಲರೂ ಮರೆಯಬಾರದು.

# ಲಲಿತ ಲಹರಿ

## ಆಶಯ



ಭಾವದ ಬದುಕಿದು ಭಾವನೆ ತಪ್ಪದು
ಭಕುತಿಯಿರದಿರೆ ಪಾಶ ಸೆಳೆವುದು
ಕಿಂಕಿಣಿ ಘಲಿರೊಂದೂ ಕೇಳದ
ಮಿಡಿತವಿರದ ಯಂತ್ರವಾದೊಡೆ
ಸಿಗುವ ಸುಖವೇನು ನಿರತದಿ?

ಹೆಜ್ಜೆಗೆಜ್ಜೆಯ ಲಾಸ್ಯ ಮೆರೆಯಲಿ
ಎನಿತೊ ಸಂಭ್ರಮ ನಾಟ್ಯವಾಡಲಿ
ಢಮರು ನಾದಕೆ ನರ್ತಿಸಲಿ ಮನ ತಾಂಡವವಾಡಲಿ
ಪ್ರಳಯವಾಗಲಿ, ಕೊಚ್ಚಿಹೋಗಲಿ ಕಿಲ್ಬಿಷದ ಕೊಳೆ
ಮತ್ತೆ ಹುಟ್ಟಲಿ ಕ್ಷೀರಸಾಗರದಲ್ಲಿ ಅಮೃತವು

ಜಗದ ಮುಪ್ಪಿದು ಕವಿತೆ ಹುಟ್ಟಲಿ
ಕಾಲ ಬೆಳೆವನು ಭ್ರಮೆಯ ಕಳೆವನು
ಬದುಕ ಅರಳಿಸೊ ಶಕ್ತಿ ಅಕ್ಷರವೆಂಬ ಕುಸುಮ
ನಿವೇದನೆಯ ಜೊತೆ ಪುಷ್ಪಜಾತ್ರೆಗೆ ಸಿದ್ಧರಾಗೋಣ

ಮನಸು ಮಜ್ಜನ
ಮಾಡಿ ಪುಳಕಿತ
ಭಾಷೆಯಮ್ಮನ
ಒಲವನೂಟದಿ
ಹೊಸತು ಬೆಳಗಿದು
ಹಸಿರೋ ಹಸಿರು.

**ಕಪಿಲಾ ಶ್ರೀಧರ್, ಬೆಂಗಳೂರು ( ಮನಃಶಾಸ್ತ್ರಜ್ಞೆ, ಕವಯತ್ರಿ)**



ನರ್ತನ ಸುರಭಿ

# 'ನೃತ್ಯ: ಅಂದು, ಇಂದು, ಮುಂದು'

✦ ನಾಟ್ಯಾಚಾರ್ಯ ಕೆ. ಮುರಲೀಧರ ರಾವ್

**ಕ**ಲೆಯು ತನ್ನಲ್ಲಿರುವ ರೂಪಿನಲ್ಲಿ ಹಲವು ಹೆಚ್ಚು ಕಡಿಮೆ ಮಾಡಿರುವುದಕ್ಕೆ ಕಾರಣಗಳಿವೆ. ತನಗೆ ಎದುರಾಗಿರುವ ಸಾಮಾಜಿಕ ಅಂಶ, ರಾಜಕೀಯ, ಆರ್ಥಿಕ ಹಾಗೂ ಸಾಂಸ್ಕೃತಿಕ ಕಾರಣಗಳಿಂದ ಈ ಸಮಾಜದಲ್ಲಿ ತನ್ನ ಬದಲಾವಣೆ ಆಯಿತೆನ್ನುತ್ತದೆ. ಅದೂ ಸಾಲದೆ ಮಾನವನ ಮನಸ್ಸಿನ ರಸಾನುಭುತಿ ಕೂಡಾ! ಜೀವನ ಕ್ರಮ ನಿಬಂಧನೆಯೇ ಹೆಚ್ಚು ಕಡಿಮೆಗಳನ್ನು ಕಲಾಭಿವ್ಯಕ್ತಿಯಲ್ಲಿ ಕಾಣಿಸುವುದು ನಿಜ. ಜೀವನದ ಸ್ಥಿತಿಯೂ ಅಂತಹ ಅವಸ್ಥೆಯನ್ನು ನಿರೀಕ್ಷಿಸುತ್ತಿದೆ. ಹರಿಕಥೆ ಮುಂತಾದ ಧಾರ್ಮಿಕ ಚರ್ಚಾ ವಿಷಯಗಳು, ಸಾಹಿತ್ಯ ಕುರಿತಾದ ನಿಯಮಗಳು, ತಮಿಳು, ತೆಲುಗು, ಕನ್ನಡ ಹಾಗೂ ಸಂಸ್ಕೃತದ ಪದವಿಶೇಷಗಳು, ದೇವಲದಲ್ಲಿ ಕಂಡ ಶಿವನ ದೃಶ್ಯ. ನುಡಿಸುವ ನಾದವೈಭವ, ಕೇಳಿಸುವ ಮೃದಂಗಧ್ವನಿ, ಪೂಜಾಸಮಯದಲ್ಲಿ ಕಿವಿಗೆ ಬೀಳುವ ಮಂತ್ರಗಳಲ್ಲದೆ, ಭಕ್ತರ ಆಂತರ್ಯದ ಸ್ಥಿತಿಗಳು–ಇಷ್ಟೆಲ್ಲಾ ಭರತನಾಟ್ಯದಲ್ಲಿ ಕಾಣಿಸುತ್ತಿದ್ದ ದೃಶ್ಯಚಿತ್ರಗಳು.

ಆದರೆ ಪರಂಪರೆಯು ಹೊರಹೊರಡಲು ಸಿದ್ಧವಾಯಿತು, ದೇವದಾಸಿಯರು ತಮ್ಮ ಇರವನ್ನು ಇತರರಿಗೂ ತೋರಿಸಹತ್ತಿದರು; ನೃತ್ಯ ನಡೆಯುತ್ತಿದ್ದ ದೇವಲದಲ್ಲಿ, ರಾಜರಿರುವ ನಡೆವ ಸಭೆಯಲ್ಲಿ ಉತ್ತಮರೆದುರು ಪ್ರದರ್ಶನ ಮಾಯವಾಯಿತು. ಆ ಸಹೃದಯರ ಗುಂಪಿನಲ್ಲಿ ನರ್ತಿಸುವವರ ಮನಸ್ಥಿತಿಯಿರುವ ರಸಿಕರೆಲ್ಲಾ ಹೊರಟುಹೋಗಿ ಈಗ ಪ್ರಾಪಂಚಿಕ ಸಂಕುಚಿತ ಜನಗಳ ಎದುರಿಗೆ ಕುಣಿಯಬೇಕಾಯಿತು. ನರ್ತಿಸುವವರ ಮನದ ಅವಸ್ಥೆಯನ್ನು ಪರಿಭಾವಿಸಿ ಆನಂದ ಪಡೆಯದ ಜನರಿದಿರು ಗೆಜ್ಜೆ ಕಟ್ಟಬೇಕಾಯಿತು. ನರ್ತಕಿ ಹಾಗೂ ಅದನ್ನು ಗ್ರಹಿಸಿ ನೋಡುವ ಪ್ರಿಯರ ನಡುವಿನ ಸಂಬಂಧ ಕುಲಗೆಟ್ಟಿತು. ರಸಿಕಜನರ ಭಾವನೆಯನ್ನು ಹೊಡೆದೆಬ್ಬಿಸುವ ನರ್ತಕಿ ಈಗ ಸೋತುಹೋದಳು.

ಇಂದಿಗೂ ತನಗಿದಿರಾದ ದುರವಸ್ಥೆಯಿಂದ ಪಾರಾಗಲು ವಿಶ್ವದ ಯಾವುದೋ ಒಂದು ಭಾಗದ ನಿಶ್ಚಲ ಏಕಾಂತ ಸ್ಥಿತಿಯಲ್ಲಿ ಆ ಕಲಾವಸ್ತುವೀಗ ಸಂಗೀತ ನೃತ್ಯಗಳ ಸಹವಾಸವಿರದ, ಇತರ ಕ್ಷೇತ್ರದವರಿಗಾಗಿ ಮುಖ ತೋರಿಸುವುದಾಗಿದೆ. ಅಂದರೆ ತನ್ನ ಪ್ರದೇಶದ ಉತ್ತಮಿಕೆಯನ್ನು ಕಳೆದು ತಾನೀಗ ಮುಖಸೌಂದರ್ಯ ಹಾಗೂ ದೇಹದ ಸಿರಿಯನ್ನು ಮಾತ್ರ ಅನುಭವಿಸುವವರ ಇದಿರಿಗೆ ಕುಣಿವ ವಸ್ತುವಾಗಿದ್ದಾಳೆ.

ಕಲೆಯನ್ನು ಚೆನ್ನಾಗಿ ಕಲಿವ ಲಕ್ಷಣ ಹೊಂದಿದ ಅನೇಕರು ಹಲವು ಗುರುಗಳಿಂದ ಉಪದೇಶ ಪಡೆದುಕೊಂಡಿದ್ದಾರೆ. ಆದರೆ ವೃದ್ಧಾಪ್ಯ ತಾಳಿದ ಗುರುಮಹಾಶಯರು, ಕಲೆಗಾಗಿ ಪೂರ್ಣ ಆರಾಧನೆಯನ್ನು ಮಾಡುವವರ ಕೈಬಿಟ್ಟ ಶಾಸ್ತ್ರೋಕ್ತ ರೀತಿಯ ವಿಚಾರವೇನೂ ತಿಳಿಯದ ನೃತ್ಯಶಿಕ್ಷಕರು ಮತ್ತು ಗುರು ವಿದ್ಯಾರ್ಥಿಗಳ ನಡುವೆ ನಡೆವ ಕದನ ಬಹಳ ಸೂಕ್ಷ್ಮವಾದುದು. ಶಾಲೆ ಹಾಗೂ ಬಾನಿ (ಕ್ರಮ ಮರ್ಯಾದೆ)ಗಳ ನಡುವೆ ಕಂದಕ ಏರ್ಪಟ್ಟಿದೆ. ಮುಂದಿನ ದಿನಗಳಲ್ಲಿ ಹಲವಾರು ತರದ ಶಾಸ್ತ್ರೀಯ ನರ್ತನಗಳೆಲ್ಲ ಹೇಳಹೆಸರಿಲ್ಲದೆ ಮಾಯವಾಗುವ

ಲಕ್ಷಣವೀಗೀಗ ಕಾಣಿಸುತ್ತಿದೆ. ಈಗ ಮೂಡಲ–ಪ್ರಾಚ್ಯ–ಪೌರಾತ್ಯ ಸಂಸ್ಕೃತಿಯ ನೆಲೆಗಟ್ಟೇ ಅವರಿಗೆ ಬೇಕಾದುದಲ್ಲದೆ, ಆ ಕಲೆಯನ್ನು ಕಲಿಯಬೇಕಾದ ಲಕ್ಷಣವೇ ಅವರಲ್ಲಿ ಕಾಣಿಸುತ್ತಿಲ್ಲ. ಒಟ್ಟಿನಲ್ಲಿ ಶಾಸ್ತ್ರೀಯ ಕಲೆಯ ಅವನತಿಯ ಸೂಚನೆ ಹೆಚ್ಚಾಗುತ್ತಿದೆ!

ಇಂದಿಗೆ 'ಆಂಗಿಕ'ದಲ್ಲಿ ದೇಹದ ವಿವಿಧ ಅಂಗಭಾಗಗಳ ಚಲನೆಯೇ ಚೋದ್ಯವೆನಿಸುತ್ತದೆ. ಶಾಸ್ತ್ರೀಯ ನೃತ್ಯದಲ್ಲಿ ಇರಲೇಬೇಕಾದ ಮುಖ್ಯ ಚಲನೆಯೇ ಇವರಲ್ಲಿಲ್ಲ. ಎಲ್ಲಕ್ಕೂ ಮೊದಲು ಆ ಕ್ರಮಕ್ಕೆ ಹೊಂದಿರುವ ದೇಹಕ್ಷೇತ್ರಗಳು, ಘನಾಕೃತಿಗಳ ಪ್ರಮಾಣ–ಸಂಬಂಧಗಳ ಶಾಸ್ತ್ರ, ಜ್ಯಾಮಿತಿ ಇವುಗಳೆಲ್ಲವುಗಳ ಪರಿಜ್ಞಾನವಿರಬೇಕು. ಇದನ್ನು ತಿಳಿದ ವ್ಯಕ್ತಿ ಮಾಡುವ ನೃತ್ಯ ಹಲವು ಕಡೆ ಆದರವನ್ನು ಪಡೆಯುತ್ತದೆ. ಆದರೆ ಉಳಿದವರೆಲ್ಲಾ ಆ ಮಟ್ಟಕ್ಕೆ ಏರಿದ ಸಂದರ್ಭ ಬಹಳ ಕಿರಿದು.

ಆಂಗಿಕದಲ್ಲಿ ನೃತ್ತಭಾಗವು ಕೊನೆಯೇ ಇಲ್ಲವೆನ್ನುವಷ್ಟು ರೀತಿಗಳಲ್ಲಿದೆ. ಒಂದು ಜತಿಯ ತೀರ್ಮಾನಗಳು ತಮ್ಮ ನಡೆಯ ಹಲವು ವಿಭಾಗದ ತಾಳಾವರ್ತಗಳನ್ನು ಕೂಡಿಸಿರುವುದುಂಟು. ತಾಳಾವರ್ತಗಳು ಹಿಂದಿಗಿಂತಲೂ ಈಗ ಇನ್ನಷ್ಟು ಚಾಣಾಕ್ಷ ಸ್ಥಿತಿಯಲ್ಲಿದ್ದು, ಹಲವು ತಾಳಗಳಿಗೆ ಅನುಸಾರವಾಗಿ ಹೆಣೆಯಲ್ಪಟ್ಟಿದೆ. ಈ ದಿಶೆಯಲ್ಲಿ ಪದವರ್ಣಗಳಿಗೆ ಬೇರಿತರ ವರ್ಣಗಳನ್ನು ಬೆರೆಸಿ, ಕಲಾ ಮರ್ಯಾದೆಯನ್ನು ಕುಂಠಿತಗೊಳಿಸುವಲ್ಲಿಗೆ ಬಂದಿದ್ದೇವೆ. ಒಂದು ವರ್ಣದ ಅಭಿನಯದಲ್ಲಿ ಸಂಗೀತದ ನೆರವಿನಲ್ಲಿ ನಡೆಯತಕ್ಕ ವಸ್ತುವಿಗೆ ಅಭಿನಯದ ಸಂಚಾರಿ ಭಾವಗಳನ್ನು ಕೊಡತಕ್ಕದ್ದು. ಆದರೆ ಇಂದು ನರ್ತಕಿ ಸಾಹಿತ್ಯದ ಮಾತುಗಳಿಗೇ ಮಾತ್ರವೇ ಅರ್ಥ ತೋರಿಸುತ್ತಾಳೆ; ಸಂಚಾರಿ ಭಾವಗಳಿಗೆ ಒಂದು ಶುಷ್ಕ ಕಥೆಯನ್ನು ಮಾತ್ರ ಕಾಣಿಸುತ್ತಾಳೆ.

ನಾಯಕಿ ಇಂದು ತಾನೇ ಒಬ್ಬ ನರ್ತಕಿಯಾಗಿದ್ದಾಳೆ. ಅವಳಿಗೆ ಸಹಾಯಕ ವಸ್ತುವಿರದೆ ತನ್ನ ಮಾತಿನ ಅಥವಾ ಯೋಗ್ಯತೆಯನ್ನು ಕಾಣಿಸುವ ಸನ್ನಿವೇಶವಿದೆ. ಅವಳು ಅತಿರೇಕವಾಗಿ ಉಪಯೋಗಿಸುವ ಸಾಹಿತ್ಯವನ್ನೇ ಆಧರಿಸಿದ್ದಾಳೆ. ಹೊಸದಾರಿಗೆ ಹೋದರೆ ಜನರ ಕಠಿಣ ವಿಮರ್ಶೆಗೆ ಗುರಿಯಾಗುವ ಸಂದರ್ಭ ಕಾಣಿಸುತ್ತದೆ.



ಪದವರ್ಣಗಳಿಗೆ ಅಭಿನಯಿಸುವಾಗ ಪಲ್ಲವಿಯಲ್ಲಿ ಯಾವುದೋ ಒಂದು ಸನ್ನಿವೇಶವಿದೆ; ಉದಾ: ಹೆಚ್ಚಿನ ವರ್ಣಗಳಲ್ಲಿ ಪ್ರಾರಂಭವಾಗುವ ವಾಸಕ ಸಜ್ಜಾ ಅಥವಾ ಮೋಹಿತಳಾದ ನಾಯಕೀ ಲಕ್ಷಣದಿಂದ ಅವಳ ಸ್ವಭಾವ ಕ್ರಮವೇನೆಂದು ಎಲ್ಲರಿಗೂ ತಿಳಿದ ವಿಷಯವೇ. ಆದರೆ ನಾವು ತೆಗೆದುಕೊಳ್ಳುವ ವರ್ಣದ ಸಾಹಿತ್ಯದಲ್ಲಿ ಆ ನಾಯಕಿಗೆ ಬೇರೆ ತರದ ಮಾತಿದ್ದರೂ, ಹೆಚ್ಚಿನವರೆಲ್ಲರೂ ಹಿಂದೆ ತಾವು ಅಭಿನಯಿಸಿದ ಚಿತ್ರಣವನ್ನೇ ಪುನಾ ತೋರಿಸುತ್ತಾರೆ. ಇತರ ನಾಯಕಿಯ ಗುಣ ಬೇರೆಯಾಗಿದ್ದರೂ ನವು ನೋಡುವುದು ಇನ್ನೊಬ್ಬ ನಾಯಕಿಯ ವೃತ್ತಾಂತ. ಇಂತಹ ಅಭಿನಯವೇ ಪದಾಭಿನಯದಲ್ಲಿರುತ್ತದೆ. ಭಾವ ಗೊತ್ತಿರದಿದ್ದರೂ ಪಲ್ಲವಿಯನ್ನು ಮುಗಿಸಿಬಿಟ್ಟೇವೆಂಬ ಕೃತಾರ್ಥತೆ!?

# ಹಸ್ತ ಮಯೂರಿ

ಲಕ್ಷಣ: ಮಧ್ಯ ಮತ್ತು ಹೆಬ್ಬೆರಳುಗಳ ತುದಿಯನ್ನು ಕೂಡಿಸಿ ತೋರುಬೆರಳನ್ನು ಒಳಗೆ ಬಾಗಿಸಬೇಕು. ನಂತರ ಉಳಿದ ತೋರು, ಕಿರುಬೆರಳನ್ನು ನೀಡಬೇಕು. ಭ್ರಮರ ಎಂದರೆ ದುಂಬಿ ಎಂದರ್ಥ. ನಾಟ್ಯಶಾಸ್ತ್ರದಲ್ಲಿ ಹೆಬ್ಬೆರಳು ಮಧ್ಯದ ತುದಿಯನ್ನು ಮುಟ್ಟಿ ಕಿರು ಬೆರಳು ವಕ್ರವಾಗಿ, ಮಿಕ್ಕೆರಡು ಬೆರಳುಗಳು ಚಾಚಲ್ಪಡಬೇಕು. ಹಸ್ತ ಮುಕ್ತಾವಳಿಯಲ್ಲಿ ಹೆಬ್ಬೆರಳು ಮತ್ತು ಮಧ್ಯದ ಬೆರಳನ್ನು ಸೇರಿಸಿ ಉಳಿದ ಬೆರಳನ್ನು ನಿಡಿದಾಗಿ ಹಿಡಿಯಬೇಕು. ಇದೇ ಹಸ್ತವನ್ನು ಮತ್ತೊಂದು ಬಾರಿ ಪ್ರತ್ಯೇಕ ಹಸ್ತವಾಗಿ ಪರಿಗಣಿಸಿ ಚಲನ ಮಧುಕರವೆಂದು ಕರೆಯಲಾಗಿದ್ದು, ಅದರಲ್ಲಿ ಹೆಬ್ಬೆರಳು ಮತ್ತು ಮಧ್ಯದ ಬೆರಳನ್ನು ಸೇರಿಸಿ ಕಿರು ಬೆರಳನ್ನು ಮೇಲೆತ್ತಿ, ಉಳಿದ ಬೆರಳುಗಳನ್ನು ಬಗ್ಗಿಸಿ ಅಲುಗಾಡಿಸುತ್ತಿರಬೇಕು. ಕಥಕಳಿಯಲ್ಲಿ ಭ್ರಮರವೆಂದು ಕರೆಯಲ್ಪಡುವ ಹಸ್ತದ ಲಕ್ಷಣಗಳು ವಿಭಿನ್ನ. ಅದು ಅಭಿನಯದರ್ಪಣದ ಅರಾಳದಂತೆ. ಇದ್ದು ತೋರುಬೆರಳನ್ನು ಮಡಚುವುದಾಗಿದೆ.

## ಭ್ರಮರ ಹಸ್ತ

ಕಶ್ಯಪನು ತನ್ನ ಪತ್ನಿ ಅದಿತಿಗೆ ಕರ್ಣಾಭರಣಗಳನ್ನು ಮಾಡುವಾಗ ಉದ್ಭವವಾದ ಹಸ್ತ ಭ್ರಮರ. ಖೇಚರವರ್ಣ, ಮೇಚಕ ಬಣ್ಣ, ಋಷಿ : ಕಪಿಲ, ಅಧಿದೇವತೆ : ಗರುಡ. ಇದು ನಪುಂಸಕಹಸ್ತದ ಪ್ರಕಾರಕ್ಕೆ ಸೇರಿದೆ. ಯೋಗದಲ್ಲಿ ಕಂಡುಬರುವ ಚಿಕಿತ್ಸಕ ಮುದ್ರೆಗಳ ಪೈಕಿ ಈ ಹಸ್ತವು ಭ್ರಮರ ಮುದ್ರೆಯೆಂಬುದಾಗಿದ್ದು ಇದರ ಬಳಕೆ ಪ್ರತಿರೋಧಕ ಶಕ್ತಿ ಉದ್ದೀಪನೆಗೆ, ಅಲರ್ಜಿ, ರೋಗ ನಿರೋಧಕ ಔಷಧಿಯಿಂದ ಉಂಟಾಗುವ ದುಷ್ಪರಿಣಾಮಗಳ ನಿವಾರಣೆಗೆ ಸಹಕಾರಿ.



**ವಿನಿಯೋಗ:** ಜೇನುನೊಣ, ದುಂಬಿ, ಗಿಣಿ, ರೆಕ್ಕೆ, ಸಾರಸಪಕ್ಷಿ, ಕೋಗಿಲೆ ಮೊದಲಾದ ಪಕ್ಷಿ.

**ಇತರೇ ವಿನಿಯೋಗ :** ಕಮಲ ಮುಂತಾದ ಉದ್ದನೆಯ ತೊಟ್ಟುಗಳುಳ್ಳ ಹೂಗಳನ್ನು ಕೊಯ್ಯುವುದು, ಕರ್ಣಕುಂಡಲ, ಕ್ರೂರವಾದ ಮುಖ, ಮಾವಿನ ತೆನೆ, ತಾಲಪತ್ರ, ಮುಳ್ಳು ತೆಗೆಯುವುದು, ಯೋಗಾಭ್ಯಾಸ, ಮೌನವ್ರತ, ಗಜಯುದ್ಧದಲ್ಲಿ ದಂತಘಾತ, ಬೀಸಣಿಗೆಯಂತಿದ್ದ ಉದ್ದನೆಯ ಎಲೆಗಳನ್ನು ಹಿಡಿಯುವುದು, ಕಿವಿಯ ಗುಗ್ಗೆಯನ್ನು ತೊಡೆದುಕೊಳ್ಳುವುದು, ಕೊಂಬು, ಕಿರಿಕಿರಿಯಿಂದ ತಪ್ಪಿಸಿಕೊಳ್ಳುವುದು, ಸೊಂಟಪಟ್ಟಿಯನ್ನು ಸಡಿಲಗೊಳಿಸುವುದು, ಎರಡು ಅಕ್ಷರದ ಕ್ರಿಯಾ ವಿಶೇಷಣ, ಹಾರಾಡುವ ಜೀವಿಗಳು, ಮೇಚಕಬಣ್ಣ, ರಹಸ್ಯವಾದ ವಿಷಯವನ್ನು ಕಿವಿಯಲ್ಲಿ ಉಸುರುವುದು.

ಕ್ರೀಡೆ, ಕಪ್ಪು ದುಂಬಿಗಳ–ಜೀರುಂಡೆಗಳ ಶಬ್ದ ಕೇಳುವುದು, ದೊಡ್ಡ ಕರ್ಣಾಭರಣ, ಮೊಸಳೆ, ಘೇಂಡಾಮೃಗ, ಬಿಸಿಯಾದ ಪದಾರ್ಥಗಳನ್ನು ಮೇಲೆತ್ತುವುದು, ಅನಂತವೆಂಬ ಸರ್ಪ, ಏಳು ಹೆಡೆ ಸರ್ಪ, ತಕ್ಷಕ, ವಾಸುಕಿ, ಆನೆ, ಜಿಂಕೆ, ಕುದುರೆ, ಕೋಡುಗಳಿರುವ ಪ್ರಾಣಿ, ಹೂವು ಕೊಯ್ಯುವುದು, ವರಾಹಾವತಾರ, ಕೋಳಿ, ಲಕುಚವೃಕ್ಷ ಇತ್ಯಾದಿಗಳನ್ನು ಸೂಚಿಸಲು ಬಳಸಬಹುದು. ದಿನನಿತ್ಯ ಜೀವನದಲ್ಲಿ ಈ ಹಸ್ತದ ಬಳಕೆ ಕಡಿಮೆ.

ಭ್ರಮರದಿಂದ ತೋರುಬೆರಳನ್ನು ಹೆಬ್ಬೆರಳ ತುದಿಗೆ ಮುಟ್ಟಿಸಿ ನಂತರ ಹಸ್ತವನ್ನು ಅಗಲವಾಗಿ ಅಲ್ಲಾಡಿಸುವುದು ಸಂದಂಶ ಮುಕುಳ ಹಸ್ತವೆನಿಸುತ್ತದೆ. ಇದು ಕಾಗೆ ಎಂಬುದನ್ನು ಸಂವಹಿಸುತ್ತದೆ.

**ಮಂ**ಜೀರ ತುಂಬಾ ಇಷ್ಟವಾಯಿತು. ಚೆನ್ನಾಗಿ ಬರೆದಿದ್ದೀರಿ.




**– ಶ್ರೀನಿವಾಸ ದೇಶಪಾಂಡೆ, ಮಂಗಳೂರು,**

**ಸಿಬಂತಿ ಪದ್ಮನಾಭ, ತುಮಕೂರು,**

**ಎನ್. ವಿ. ವೈದ್ಯ, ಬೆಂಗಳೂರು.**

**ಮಂ**ಜೀರದಲ್ಲಿ ನೀವು ರಿಯಾಲಿಟಿ ಶೋಗಳ ಕೆಟ್ಟ ಪರಿಣಾಮದ ಬಗ್ಗೆ ತುಂಬಾ ಚೆನ್ನಾಗಿ ಬರೆದಿದ್ದೀರಿ. ರುಕ್ಮಿಣೀ ದೇವಿ ಅರುಂಡೇಲ್ ಬಗ್ಗೆ ಅಷ್ಟೊಂದು ಮಾಹಿತಿ ಮತ್ತು ಅಪರೂಪದ ಫೋಟೋಗಳು ಯಾವುದೇ ಪತ್ರಿಕೆಗಳಲ್ಲೂ ನೋಡಿರಲಿಲ್ಲ. ನಂಗಂತೂ ರುಕ್ಮಿಣೀ ದೇವಿ ಅಂಕಣ ಬಹಳ ಇಷ್ಟ.

**–ಸುರೇಶ್ ಬಿ.ವಿ.ಜಾಲಹಳ್ಳಿ, ರಾಯಚೂರು**

**ಯ**ಕ್ಷರಂಗದ ಮೇರು ಕಲಾವಿದರೆಂಬ ಪ್ರಸಿದ್ಧಿಗೆ ಭಾಜನರಾದ ಹರಿದಾಸ ಮಲ್ಪೆ ರಾಮದಾಸ ಸಾಮಗರಿಗರ್ಪಿಸಿದ ಭಾಷ್ಪಾಂಜಲಿ ನುಡಿ ನಮನ, ಯಕ್ಷಗಾನ ಪ್ರೇಮಿಗಳ ನೆನಪಿನ ಭಂಡಾರದಲ್ಲಿ ಸ್ಥಿರವಾಗಿ ಉಳಿದು ಆಗಾಗ ನೆನವರಿಕೆಯ ಕನವರಿಕೆಯಲ್ಲಿ ನಾದ ಮಾಧುರ್ಯ ನೀಡುತ್ತಿರುವ 20 ವರ್ಷಗಳ ಹಿಂದೆಯೇ ಅಸ್ತಂಗತರಾದ ಗುಂಡ್ಮಿ ಕಾಳಿಂಗ ನಾವುಡ ಭಾಗವತರ ಜೀವನಚಿತ್ರಣದ ಇಂದಿನ ಪುಟದರ್ಶನ, ಹಾಗೆಯೇ ಸ್ಥಿರಶೀರ್ಷಿಕೆಗಳಾದ ಮಂಜೀರ, ನರ್ತನ ಸುರಭಿ, ಲಲಿತ ಲಹರಿ, ಹಸ್ತಮಯೂರಿ, ದರ್ಪಣ, ಒಳನೋಟವೇ ಮುಂತಾದ ವಿನ್ಯಾಸಗಳ ಭಾವನಾಲಹರಿಗಳನ್ನೊಳಗೊಂಡ ನೂಪುರ ಭ್ರಮರಿಯ ಜೇಷ್ಠ–ಆಷಾಢ ಸಂಚಿಕೆ ಆಹ್ಲಾದಕರವಾಗಿಯೇ ಮೂಡಿಬಂದಿದೆ. ಅಭಿನಂದನೆಗಳೊಂದಿಗೆ ಹಾರ್ದಿಕ ಶುಭಾಷಯಗಳು.

**–ಕೀರಿಕ್ಕಾಡು ವನಮಾಲ ಕೇಶವ ಭಟ್ಟ, ಬನಾರಿ, ಕಾಸರಗೋಡು**

**ಭ್ರ**ಮರಿ ತುಂಬಾ ಚೆನ್ನಾಗಿ ಮೂಡಿಬರುತ್ತಿದೆ. ಪತ್ರಿಕೆಯು ನೃತ್ಯಕ್ಷೇತ್ರದಲ್ಲಿ ತೊಡಗಿಸಿಕೊಂಡ ಕಲಾವಿದರೆಲ್ಲರಿಗೂ ಸಂಗ್ರಹಯೋಗ್ಯವಾಗಿದೆ. ತಮ್ಮ ಶ್ರಮಕ್ಕೆ ಧನ್ಯವಾದಗಳು.

**–ವಿದ್ವಾನ್ ಜನಾರ್ಧನ್, 'ನಾಟ್ಯತರಂಗ', ಸಾಗರ**

## ಸಂಚಿಕೆಗಾಗಿ ಸಹಕರಿಸಿದವರು

## ವಿದ್ವಾನ್ ಜನಾರ್ಧನ್, ನೃತ್ಯಗುರುಗಳು

**'ನಾಟ್ಯತರಂಗ', ನೂಪುರ ನಿನಾದ, ಶ್ರೀನಗರ, ಸಾಗರ.**



ರಂಗಸ್ಥಳ

ನಾವಡರ ಕಂಠಸಿರಿ ಮುಂಬಯಿಯಲ್ಲೂ

# ಮೋಡಿ ಮಾಡಿತ್ತು!

ರಾಕೇಶ್ ಕುಮಾರ್ ಕಮ್ಮಜೆ, ಪುತ್ತೂರು.

ಕ್ರಿಕೆಟ್ ಬಗೆಗೆ ಆಸಕ್ತಿಯಿದ್ದವರ ಮುಂದೆ ನೀವೊಮ್ಮೆ ತೆಂಡೂಲ್ಕರ್ ಹೆಸರೆತ್ತಿ ನೋಡಿ. ಮತ್ತೆ ಅನಾಮತ್ತು ಒಂದು–ಒಂದೂವರೆ ಗಂಟೆ ಅವರೇ ಮಾತನಾಡುತ್ತಾರೆ! ಮೊನ್ನೆ ಮುರಳಿಗೆ ಎಂಟುನೂರು ವಿಕೆಟ್ ಸಿಕ್ತಂತೆ ಅನ್ನಿ, ನಿಮ್ಮ ಕಥೆ ಗೋವಿಂದ! ಅವ ಹೇಗೆ ವಿಕೆಟ್ ಪಡೆದ, ಅವನ ತಾಕತ್ತೇನು?, ಅವನಿಗೆ ಇದೆಲ್ಲಾ ಹೇಗೆ ಸಾಧ್ಯವಾಯಿತು?, ಅವನ ಎಂಟುನೂರನ್ನು ತಪ್ಪಿಸಲು ಭಾರತಕ್ಕೆ ಸಾಧ್ಯವಿತ್ತೇ?... ಹೀಗೆ ಅವರ ವಿಷಯ ಮುಗಿಯುವುದೇ ಇಲ್ಲ. ಬೆಳ್ಳಂಬೆಳಗ್ಗೇ ಎದ್ದು ಉದಯ ಮೂವೀಸ್ ಹಾಕಿ ಕೂರುವವರ ಮಂದೆ ರಾಜ್ ಕುಮಾರ್ ಅನ್ನಿ. ಹುಟ್ಟಿನಿಂದ ಸಾವಿನವರೆಗಿನ ಅಷ್ಟೂ ಸಂಗತಿಗಳು ನಿಮ್ಮ ಮುಂದೆ ಹಾಜರ್. ಮಾತ್ರವಲ್ಲ, ವೀರಪ್ಪನ್ ಹೊತ್ತೊಯ್ದ ವಿಚಾರ ಹೇಳುವಾಗ ದುಃಖ ಬೇರೆ!! ಒಟ್ಟಿನಲ್ಲಿ ಈ ತೆಂಡೂಲ್ಕರ್, ಅಮಿತಾಬ್ ಬಚ್ಚನ್, ಭೀಮಸೇನ ಜೋಷಿ, ಲತಾ ಮಂಗೇಶ್ಕರ್... ಇವರೆಲ್ಲಾ ಇರುವುದೇ ಹೀಗೆ, ಎಲ್ಲರಿಗೂ ಹುಚ್ಚು ಹಿಡಿಸುವ ಹಾಗೆ. ಅದರಲ್ಲೂ ಕೆಲವರಂತೂ ಈ 'ಸ್ಟಾರ್'ಗಳನ್ನೇ ಹಗಲಿರುಳು ಧೇನಿಸುತ್ತಿರುತ್ತಾರೆ.



ಇವುಗಳನ್ನೆಲ್ಲಾ ಯಾಕೆ ಹೇಳುತ್ತಿದ್ದೇನೆಂದರೆ 'ಯಕ್ಷಗಾನದ ಹುಚ್ಚ'ರ ಪಾಲಿಗೆ ದಿ|ಗುಂಡ್ಮಿ ಕಾಳಿಂಗ ನಾವಡ ಅಂದರೆ ಸಾಕು ಮತ್ತೇನೂ ಬೇಕಿಲ್ಲ. ಇಡೀ ದಿವಸ ಅವರ ಬಗೆಗೇ ಹೇಳುತ್ತಾರೆ. ಮೊಗೆದಷ್ಟೂ ಮುಗಿಯದ ಸಂಗತಿಗಳು. ಅಂದರೆ, ಕರ್ನಾಟಕದ ಯಕ್ಷಲೋಕಕ್ಕೆ ಬಂದರೆ ನಾವಡರೊಬ್ಬ ಅತ್ಯಪೂರ್ವ ಸ್ಟಾರ್, ತೆಂಡೂಲ್ಕರ್‌ನಂತೆ!! ಬರೀ ಮೂವತ್ತೆರಡು ವಯಸ್ಸಿನಲ್ಲಿ ನಾವಡರು ಏರಿದ ಎತ್ತರ ಒಂದು ಸಾರ್ವಕಾಲಿಕ ದಾಖಲೆಯೇ ಸರಿ.

ಅದ್ಹೇಗೆ ನಾವಡರಿಗೆ ಆ ಕಂಠ ಪ್ರಾಪ್ತವಾಯಿತೋ ಗೊತ್ತಿಲ್ಲ. ಹಿಂದೆಂದೂ ಯಕ್ಷಕಲಾಭಿಮಾನಿಗಳು ಕಂಡು ಕೇಳರಿಯದ ಧ್ವನಿ ಅವರನ್ನು ಇಡೀ ಯಕ್ಷಲೋಕದಲ್ಲೇ ಅಪೂರ್ವರನ್ನಾಗಿಸಿತು. ಕರ್ಣಕಠೋರವಾಗಿರುವ ಏರು ಪದ್ಯಕ್ಕೂ ಒಂದು ಇಂಪನ್ನು ಕೊಟ್ಟವರವರು. ನಾವಡರ ಯಾವುದೇ ಭಾಗವತಿಕೆಯನ್ನು ಕೇಳಿ ನೋಡಿ, ಯಾವತ್ತೂ ಅವರು ಬೋರ್ ಆಗುವುದಿಲ್ಲ. ಕಾರಣ ಅವರ ಕಂಠ!

ಚಿಟ್ಟಾಣಿ ರಾಮಚಂದ್ರ ಹೆಗಡೆಯವರ ಬಗೆಗೆ ನಿಮಗೆ ಗೊತ್ತಿದೆ. ಅಂಥ ಚಿಟ್ಟಾಣಿಗೆ ಕಾಳಿಂಗ ನಾವಡರು ಅತ್ಯುತ್ತಮ ಜೋಡಿಯಾಗಿದ್ದರು. 'ನಾವಡ ಹಾಗೂ ಚಿಟ್ಟಾಣಿ

ಜೊತೆಗಿದ್ದರೆ ಆ ಸೊಬಗೇ ಬೇರೆ. ಇವರಿಗೆ ಅವರು ಸ್ಫೂರ್ತಿ, ಅವರಿಗೆ ಇವರು. ಅದರಲ್ಲೂ ನಾವಡರು ನೀಲಗಗನದೊಳು ಮೇಘಗಳ..., ಎಲ್ಲೆಲ್ಲು ಸೊಬಗಿದೆ..ಎಲ್ಲೆಲ್ಲೂ ಸೊಗಸಿದೆ... ಹಾಡು ಹಾಡಬೇಕು, ಚಿಟ್ಟಾಣಿ ಕುಣಿಯಬೇಕು. ಅದಕ್ಕಿಂತ ದೊಡ್ಡ ಮನರಂಜನೆಯೇನಿದೆ ಸ್ವಾಮಿ ಬದುಕಿನಲ್ಲಿ?' ಅನ್ನುತ್ತಾರೆ ಯಕ್ಷಾಭಿಮಾನಿಗಳು.

ನಾವಡ ಹಾಗೂ ಚಿಟ್ಟಾಣಿ ನಮ್ಮವರನ್ನು ಮಾತ್ರ ಮೋಡಿ ಮಾಡಿದ್ದಲ್ಲ. ಆ ಕಾಲದಲ್ಲೇ ಮುಂಬಯಿಗೆ ಹೋಗಿ, ವರ್ಷವೊಂದರಲ್ಲಿ ಭಸ್ಮಾಸುರ ಮೋಹಿನಿ ಪ್ರಸಂಗವೊಂದನ್ನೇ ನಲವತ್ತಕ್ಕೂ ಹೆಚ್ಚು ಬಾರಿ ಆಡಿದ್ದರೆಂದರೆ ಅಲ್ಲಿನ ಜನ ಅದೆಷ್ಟು ಮರುಳಾಗಿದ್ದಿರಬಹುದು ನೀವೇ ಯೋಚಿಸಿ. ಯಕ್ಷಗಾನದ ಗಂಧಗಾಳಿಯಿಲ್ಲದಿದ್ದ ಮುಂಬಯಿಯಲ್ಲೂ ಯಕ್ಷಗಾನಕ್ಕೊಂದು ಸ್ಪಷ್ಟ ನೆಲೆ ಕಲ್ಪಿಸಿದ ಕೀರ್ತಿ ನಾವಡ ಹಾಗೂ ಚಿಟ್ಟಾಣಿಯದ್ದು. 'ಇವತ್ತಿಗೂ ರಂಗಕ್ಕೆ ಬಂದಾಗ ನಾವಡರ ನೆನಪು ನನ್ನನ್ನು ಗಾಢವಾಗಿ ಕಾಡುತ್ತದೆ' ಅನ್ನುವ ಚಿಟ್ಟಾಣಿ ಮಾತಿನಲ್ಲಿ ನಾವಡರ ನೆನಪು ಮಡುಗಟ್ಟುತ್ತದೆ. ಬರಿದೆ ಕೇಳುವ ನಮ್ಮನ್ನೇ ನಾವಡರು ಈ ಪರಿ ತಟ್ಟುತ್ತಿರುವಾಗ ಅವರದೇ ಹಾಡಿಗೆ ಕುಣಿದ ಕಲಾವಿದರಿಗೆ ಅವರ ಸಾವನ್ನು ಸಹಿಸುವುದು ಹೇಗೆ ತಾನೇ ಸಾಧ್ಯವಾದೀತು ಹೇಳಿ ?

ಏನೇ ಹೇಳಿ, ನಾವಡರು ತಮ್ಮ ಎಳೆಯ ವಯಸ್ಸಿನಲ್ಲೇ ನಮ್ಮನ್ನು ಬಿಟ್ಟು ಹೋಗಿ ತುಂಬಾ ಅನ್ಯಾಯ ಮಾಡಿದರು. ಅವರು ಈಗಲೂ ಇದ್ದಿದ್ದರೆ ಯುವ ಪೀಳಿಗೆಯ ಅದೆಷ್ಟೋ ಮಂದಿ ಆ ಕಂಠಸಿರಿಯನ್ನು ಪ್ರತ್ಯಕ್ಷವಾಗಿ ಕಂಡು–ಕೇಳಿ ಧನ್ಯರಾಗುತ್ತಿದ್ದರು. ಛೆ, ನಾವೆಲ್ಲಾ ಅಷ್ಟು ಪುಣ್ಯ ಮಾಡಿಲ್ಲ ಬಿಡಿ...

## ನಾಟ್ಯ

ನಡಿಗೆಯ ಲಯಕೆ
ಬಳುಕುವ ಜೊತೆಗೆ
ಭಾವ ರಾಗಗಳ ಬರವಣಿಗೆ
ಹಾವ ಭಾವಗಳ ನೋಡಿ
ರಸದೂಟ ಕಣ್ಗಳಿಗೆ
ಎಲ್ಲವನೂ ಮರೆತು
ಆಸ್ವಾದಿಸುವ ಘಳಿಗೆ
ಮನಸು ಶರಣಾಗಿದೆ ಕಲೆಗೆ
ಅದರ ಮೋಹ ಪರಿಗೆ

**–ವಿನುತಾ ಡಿ,**
**(ತೃತೀಯ ಪತ್ರಿಕೋದ್ಯಮ ವಿದ್ಯಾರ್ಥಿನಿ,**
**ವಿವೇಕಾನಂದ ಕಾಲೇಜು, ಪುತ್ತೂರು)**



ದರ್ಪಣ

# ನೃತ್ಯ ರಂಗದ ಅನಭಿಷಕ್ತ ರಾಣಿ: ರುಕ್ಮಿಣಿ

**ಕಳೆದ ಸಂಚಿಕೆಯಲ್ಲಿ..**



**(ರುಕ್ಮಿಣೀ ತಾವು ಕಲಿತಿದ್ದನ್ನು ಸಮಯ, ಸಂದರ್ಭವರಿತು ಸಂಸ್ಕೃತಿಗೆ ಏನು ಅಗತ್ಯವೋ ಅದನ್ನು ಪರಂಪರೆಯ ಅಡಿಪಾಯದಲ್ಲಿ ಹೊಸತಾಗಿ ಪುನರ್ ರೂಪಿಸುತ್ತಿದ್ದರು. ಅದರಲ್ಲೂ ವಿದೇಶಿ ತಂತ್ರಜ್ಞರಿಗೆ ಭಾರತೀಯ ರಂಗದ ಪರಿಜ್ಞಾನ ಅಷ್ಟಾಗಿ ಇರಲಿಲ್ಲವಾದದ್ದರಿಂದ ಅವರ ಸಹಕಾರವಿದ್ದರೂ, ರುಕ್ಮಿಣೀ ಅವರ ಮಾರ್ಗದರ್ಶನವಿಲ್ಲದೇ ಅಗುತ್ತಿರಲಿಲ್ಲ. ಪರಂಪರೆಯ ಆತ್ಮವನ್ನು ಒಯ್ಯುವಲ್ಲಿ ಮತ್ತು ಕಾಣಿಸುವಲ್ಲಿ ನಿಚ್ಚಳವಾಗಿ ಅವರ ಸಂಯೋಜನೆಗಳ ಪ್ರಭಾವ ತುಂಬಾ ದೊಡ್ಡದು. ಕೊರವಂಜಿಯ ಮುಖ್ಯ ಪ್ರದರ್ಶನಗಳಲ್ಲಿ ಕುಟ್ರಾಲಂ ದೇವಸ್ಥಾನದಲ್ಲಿ ಜರುಗಿದ್ದು ಅತೀ ಆಪ್ತವಾದದ್ದು ಎನ್ನುವುದು ರುಕ್ಮಿಣೀ ಅವರ ಅನಿಸಿಕೆ. ರುಕ್ಮಿಣೀ ಎಂದಿಗೂ ತನ್ನನ್ನು ಪರಂಪರೆಯ ಪ್ರತಿನಿಧಿಯೆಂದೋ, ಸುಧಾರಕಿಯೆಂದೋ ಕರೆಸಿಕೊಳ್ಳಲು ಇಷ್ಟಪಡಲಿಲ್ಲ.**

**ಆದರೆ ರುಕ್ಮಿಣೀ ದೇವಿ ಅವರ ಸಹೋದರ ಯಜ್ಞೇಶ್ವರ ಶಾಸ್ತ್ರಿ ನಿಧಾನವಾಗಿ ಕಟು ವಿಮರ್ಶೆಗಳನ್ನು ಮಾಡುತ್ತಾ ಕಲಾಕ್ಷೇತ್ರದಿಂದ ದೂರ ಸರಿಯುತ್ತಲೇ ಹೋದರು. ಅವರಿಗೆ ರುಕ್ಮಿಣೀ ಅವರ ವಿನೂತನ ಪ್ರಯತ್ನಗಳು ಚೆನ್ನಾಗಿ ಕಂಡರೂ ಎಲ್ಲಿ ಕೊನೆಗೆ ಒಳಿತಿಗಿಂತ ಕೆಡುಕನ್ನೇ ಕಾಣುವಂತೆ ಮಾಡುತ್ತವೋ ಎಂಬ ಹೆದರಿಕೆ ಇತ್ತು ! )**

**ಒ**ಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ಕಲೆಯನ್ನು ಹಸ್ತಾಂತರಿಸುವ ಪ್ರಕ್ರಿಯೆಯಲ್ಲಿ ಹಲವಾರು ಸಮಸ್ಯೆಗಳನ್ನು ಎದುರಿಸಿ ಗೆದ್ದು ಬಂದವರು ರುಕ್ಮಿಣೀ. ದೇವಾಲಯಗಳಲ್ಲಿ ನೃತ್ಯವನ್ನು ನಿಷೇಧಿಸಲು ಕಾಯ್ದೆ ತರಹೊರಟಿದ್ದ ಮುತ್ತುಲಕ್ಷ್ಮಿ ರೆಡ್ಡಿಯವರು ಕೂಡಾ ತಾವು ನಡೆಸುತ್ತಿದ್ದ 'ಅವ್ವೈ' ಆಶ್ರಮದಿಂದಲೂ ಹೆಣ್ಣು ಮಕ್ಕಳನ್ನು ನೃತ್ಯಾಭ್ಯಾಸಕ್ಕೆ ಕಳುಹಿಸುತ್ತಿದರೆಂದರೆ ಅದು ಸುಲಭದ ಮಾತೇ ? ಕಾಲಿಗೆ ಗೆಜ್ಜೆ ಕಟ್ಟಿ ಕುಣಿಯುವುದು ಎಂದರೆ ಹೀನವಾಗಿಯೇ ಕಾಣುತ್ತಿದ್ದ ಕಾಲವದು. ವಿದ್ಯಾಭಾಸ ಪದ್ಧತಿಯ ಲೋಪ, ಅಪಸವ್ಯಗಳು ತಿಳಿದಿದ್ದರೂ ಗುರು ಶಿಷ್ಯ ಪರಂಪರೆಯೇ ಮುಖ್ಯವೆಂದು ಪ್ರೋತ್ಸಾಹಿಸಿದರು. ತನ್ನ ಶಿಷ್ಯರನ್ನೆಲ್ಲಾ ಸ್ವಂತ ಮಕ್ಕಳಂತೆಯೇ ಬೆಳೆಸಿದರು. ಶಿಷ್ಯರು ಅತ್ತೆ, ಅಕ್ಕ, ಅಮ್ಮ ಎಂದೆಲ್ಲಾ ಸಂಬೋಧಿಸಿಸುತ್ತಿದ್ದರೇ ವಿನಾ ಔಪಚಾರಿಕ ಚೌಕಟ್ಟಿನ ಸಂಬಂಧವಿರಲಿಲ್ಲ.

ಪ್ರತಿಭೆಗೆ ಮಾನ್ಯತೆ ಕೊಡುವುದು ಮುಖ್ಯ ಎಂದು ಅರಿತಿದ್ದ ರುಕ್ಮಿಣೀ ಹೊಸಬರಿಗೆ ಅನುಕೂಲವನ್ನು ಮಾಡಿಕೊಟ್ಟರು. ಸಂಗೀತ ಮನೆತನದವರಲ್ಲದ ಕಲಾವಿದರಿಗೂ ವೇದಿಕೆಗಳಲ್ಲಿ ಅವಕಾಶ ರುಕ್ಮಿಣಿಯಿಂದಾಗಿಯೇ ಬೆಳೆದು ಬಂತು. ಮೊದಮೊದಲು ಮನೆಯಲ್ಲಿ, ಸೊಸೈಟಿಯ ಆವರಣದಲ್ಲಿ ಪಾಠ ಹೇಳಿಕೊಡುತ್ತಿದ್ದರಾದರೂ ಕ್ರಮೇಣ ನಿರಂತರ ಶಿಕ್ಷಣದ ಅಗತ್ಯವರಿತು 5 ವರ್ಷಗಳ ಸಂಸ್ಕೃತ, ಸಂಗಿತ, ಚಿತ್ರಕಲೆ, ತಾಳವಾದ್ಯಗಳನ್ನೊಳಗೊಂಡ ಕೋರ್ಸ್ ಪ್ರಾರಂಭಿಸಿದರು. ಅವರ ಶಿಷ್ಯ ಶಂಕರ್ ಮೆನನ್ ಹೇಳಿದಂತೆ 'ರುಕ್ಮಿಣಿ ಹುಟ್ಟು ಹೋರಾಟಗಾರ್ತಿ. ಬಹುಪಾಲು ಮಂದಿ ಸೂಚಿಸುವ ದಾರಿ ಎಂದು ಯಾವತ್ತೂ ನಡೆದವರಲ್ಲ.'

ವೇದಿಕೆಗೆ ನೀಲಿ ಬಣ್ಣದ ಪರದೆಗಳ ಬಳಕೆ, ಬೆಳಕಿಗೆ ಜಿಲೆಟಿನ್, ನಟ್ಟುವನ್ನಾರ್ ಮತ್ತು ಹಿನ್ನಲೆ ವಾದ್ಯದದವರನ್ನು ವೇದಿಕೆಯ ಬಲಬದಿಗೆ ಕುಳಿತುಕೊಳ್ಳುವಂತೆ ಮಾಡಿದ್ದು, ಎಂದಿಗೂ ಯಾರೂ ಯೋಚಿಸದಿದ್ದ ' ಡ್ಯಾನ್ಸ್ ಆಫ್ ನಟರಾಜ' ಮುಂತಾದ ಸಂಯೋಜನೆಗಳು, ತಮಗಾಗಿ ಮಾಡಿಕೊಂಡ ವಸ್ತ್ರವಿನ್ಯಾಸಗಳು.. ಹೀಗೆ ನೃತ್ಯದಲ್ಲಿ ಇಂದಿಗೆ ಬಳಸುವ ಅದೆಷ್ಟೋ ಸಂಗತಿಗಳು ರುಕ್ಮಿಣಿ ಅವರಿಂದಾಗಿಯೇ ಮಾರ್ಪಾಡು ಹೊಂದಿ ಚಲಾವಣೆಗೆ ಬಂದದ್ದು ಎಂಬುದು ಬಹಳಷ್ಟು ಮಂದಿಗೆ ಗೊತ್ತಿಲ್ಲ. ವಿಷಯದ ಪೂರ್ಣ ಅರಿವಿಲ್ಲದೆ ಅಂಧಾನುಕರಣೆ ಮಾಡುವವರೇ ನಮ್ಮೊಳಗೆ ಬೇಕಾದಷ್ಟಿದ್ದಾರೆ. ಇಂತವರ ಬಗ್ಗೆ ರುಕ್ಮಿಣಿ ಅವರಿಗೆ ಆಗಲೇ ಅರಿವಿತ್ತು. ಆದರೂ ತಾವಿತ್ತ ಆಲೋಚನೆಗಳು ಮಾದರಿಯಾದದ್ದಕ್ಕೆ ಸಂತಸಪಟ್ಟಿದ್ದರು. 'ಅಂತಹ ಯೋಚನೆಗಳು ಉತ್ತಮವಾಗಿರಬಹುದು ; ಆದರೆ ಸ್ವಂತಿಕೆಯು ಕೊಡುವ ಪ್ರೇರಣೆ ಎಂಬುದು ಬೇರೆಯೇ. ಅಲ್ಲದೆ ಸಮಯ, ಸಂದರ್ಭ, ಪ್ರಸ್ತುತತೆಯನ್ನರಿಯದ ಪ್ರಯೋಗ ಎಂದೆಂದಿಗೂ ದೊಡ್ಡ ಮಟ್ಟಿಗಿನ ಕೆಟ್ಟದ್ದನ್ನೇ ಉಂಟುಮಾಡುತ್ತದೆ' ಎಂಬ ಎಚ್ಚರಿಕೆ ಕೊಟ್ಟಿದ್ದರೂ ಕೂಡಾ !

ದೇವಸ್ಥಾನ ಪದ್ಧತಿಯ ಲೋಪದೋಷಗಳಿಂದ ನೃತ್ಯವನ್ನು ಆಚೆಗೆಳೆದು ನೃತ್ಯಕ್ಕೇ ದೇವಾಲಯದ ಸ್ವರೂಪ ಕೊಟ್ಟಿದ್ದರು ರುಕ್ಮಿಣೀ. ಆದರೆ ಅವರೆಂದೂ ತಾವು ಕಲಿತದ್ದನ್ನೆಲ್ಲಾ ಒಂದೇ ಸಲ ಪ್ರಯೋಗ ಮಾಡುತ್ತಿರಲಿಲ್ಲ. ಕೊರವಂಜಿಯ ಸ್ವರೂಪಕ್ಕೆ ಜನಪದ ಶೈಲಿಯನ್ನಷ್ಟೇ ಬಳಸಿದರೆ, ಭಾಗವತ ಮೇಳಕ್ಕೆ ಮೇಲತ್ತೂರಿನಿಂದ ಗುರುಗಳನ್ನು ಕರೆಸಿ ಪಾಠ ಮಾಡಿಸಿದರು. ರಾಮಾಯಣಕ್ಕೆ ಕಥಕ್ಕಳಿಯ ಗುರುಗಳಿಂದ ಮತ್ತಷ್ಟು ಭವ್ಯತೆಯ ಸೊಬಗನ್ನಿತ್ತಿದ್ದರು. ಹಾಗೆ ನೋಡಿದರೆ ಕೊರವಂಜಿಗಿಂತಲೂ ಮೊದಲೇ ಅಮೇರಿಕನ್ –ಇಂಡಿಯನ್ ರೂಪಕ 'ಹಯವತ'ವನ್ನು ಮಕ್ಕಳಿಗಾಗಿ 1930ರಲ್ಲಿ ಸಂಯೋಜಿಸಿದ್ದರು ಕೂಡಾ !

ನೃತ್ಯದ ಸಂಯೋಜನಾ ಕಲ್ಪನೆಗೆ ಪುರಾಣ, ಶಿಲ್ಪಕಲೆ– ಪ್ರತಿಮಾಶಾಸ್ತ್ರಗಳ ಆಳವಾದ ಅಧ್ಯಯನ ಬೇಕು ಎಂಬುದು ಅವರ ಅಭಿಮತ. ಅವರ ಬಹಳಷ್ಟು ಹೊಸತೆನಿಸುವ ಸಂಯೋಜನೆಗಳು ಪುರಾತನದ ಮರುಸೃಷ್ಟಿಯಲ್ಲದೇ ಬೇರೇನಲ್ಲ. ನಿಜವಾದ ಸೃಷ್ಟಿಶೀಲತೆಗೆ



**ಕರಕುಶಲ ವಸ್ತು ಮತ್ತು ಸಂಶೋಧನಾ ಕೇಂದ್ರದ ಸ್ಥಾಪನೆ ಅವರ ದೂರದೃಷ್ಟಿಗೆ ಮತ್ತೊಂದು ಸಾಕ್ಷಿ. ಕಲಾಂಕಾರಿ ಎಂಬ ಈ ಕರಕುಶಲ ವಸ್ತು ಅಧ್ಯಯನ ಮತ್ತು ತಯಾರಿಕಾ ಕೇಂದ್ರ ರುಕ್ಮಿಣೀ ಅವರ ಪ್ರಯತ್ನಗಳಿಗೆ ಮತ್ತೊಂದು ಕೈಗನ್ನಡಿ. ತರುವಾಯ ಕಮಲಾದೇವಿ ಚಟ್ಟೋಪಾಧ್ಯಾಯ ಅವರ ಯೋಜನೆಗಳಿಂದ ಮುಂದು ವರೆದುಕೊಂಡು ಬಂತು.**



ಆಧಾರ ಆಧ್ಯಾತ್ಮಿಕ ಸಂಸ್ಕಾರ ; ಅದರಿಂದಲೇ ಸಂಸ್ಕೃತಿ ಅನೂಚಾನವಾಗಿ ತಲೆಮಾರುಗಳಿಂದ ಹರಿದು ಬರುತ್ತಲಿದೆ ; ಇದರ ವಿನಾ ಸೃಷ್ಟಿ ಎನ್ನುವುದು ಕೇವಲ ಬಿಳುತ್ತಿರುವ ಸೌಧಕ್ಕೆ ಒಳಾಂಗಣ ವಿನ್ಯಾಸ ಮಾಡಿದಂತೆಯೇ ಸರಿ ಎನ್ನುವುದು ಅವರ ಬಲವಾದ ನಂಬಿಕೆ. ಹಾಗಾಗಿ ಹೊಸತು ಮತ್ತು ಹಳತರ ನಡುವೆ ಅಪೂರ್ವವಾದ ಎಳೆಯನ್ನು ಸಾಧಿಸಬಹುದು. ಹಳತಿನ ಸಾಂಗತ್ಯವಿಲ್ಲದ ಹೊಸತು ನಿರ್ಜೀವ, ಹೊಸತಿನ ಸ್ಪರ್ಶವಿಲ್ಲದ ಹಳತು ನಿಂತ ನೀರು ಎಂಬುದು ಅವರ ವಾದ. ಇದಕ್ಕೆ ಸಾಕ್ಷಿ ಸಾಂಪ್ರದಾಯಿಕ ವಿಧಾನಗಳಿಗೆ ಹೊಸ ಆಲೋಚನೆ, ನಿವೇದನೆ ಮತ್ತು ದಿಕ್ಕನ್ನು ಇತ್ತ ಅವರ ಹಲವು ಸಂಯೋಜನೆಗಳು.

ಕೇವಲ ವಿಷಯಾತ್ಮಕವಾಗಿ ಅಲ್ಲದೆ, ಪ್ರಾಯೋಗಿಕವಾಗಿಯೂ, ತಾಂತ್ರಿಕವಾಗಿಯೂ ಅರಿವನ್ನು ಪಡೆದುಕೊಳ್ಳುವ ಮತ್ತು ಇವೆಲ್ಲದರಿಂದಲಷ್ಟೇ ಬದಲಾವಣೆ, ಪರಿವರ್ತನೆ ಸಾಧ್ಯ ಎಂಬ ಮನೋಭಾವ ಕಲಾಕ್ಷೇತ್ರದ್ದಾಗಿತ್ತು. ಕಾಲವು ಕಲೆಯಿಂದ ಅಗಾಧವಾದ ವಿವರಣೆಯನ್ನು, ಗಟ್ಟಿತನವನ್ನು, ಸಂಕೀರ್ಣತೆಯನ್ನು ನಿರೀಕ್ಷಿಸುತ್ತದೆ ಎಂಬುದು ರುಕ್ಮಿಣಿಯವರ ಅನಿಸಿಕೆ. ಉದಾಹರಣೆಗೆ ಅಭಿನಯ ದರ್ಪಣದಿಂದಾಚೆಗೆ ಹಸ್ತ ಮುದ್ರೆಗಳ ಮಾದರಿಗಳು ದುಪ್ಪಟ್ಟಾದವು. ಹಲವು ವಿದ್ವಾಂಸರು ಕಲೆಯ ಮಟ್ಟ ಹೆಚ್ಚಿದಂತೆಲ್ಲಾ ವಿಷಯಗಳನ್ನು ಮತ್ತೂ ಸೇರಿಸುತ್ತಾ ಹೋದರು. ಅವರೇ ಹೇಳಿದಂತೆ 'ಕೆಲವೊಂದು ಪ್ರಚಲಿತದಲ್ಲಿರುವ ಹಸ್ತಗಳು ನಮಗನ್ನಿಸಿದ ಉದ್ದೇಶಿತಾರ್ಥವನ್ನು ಕೊಡುತ್ತಿಲ್ಲವೆಂದು ಅನ್ನಿಸಿದಾಗ ನಾನೇ ಎಷ್ಟೋ ಹೊಸ ವಿನಿಯೋಗಗಳನ್ನು ಹುಡುಕಿಕೊಳ್ಳುವಂತಾಗಿದೆ. ಕೆಲವೊಂದು ನೃತ್ಯಪ್ರಕಾರಗಳು ಕಣ್ಮರೆಯಾಗಿದ್ದರೂ ಅದು ಭಾವಾಭಿವ್ಯಕ್ತಿಗೆ ಉಪಯೋಗ ಎಂದರಿತು ಅಳವಡಿಸಿಕೊಂಡಿದ್ದೇನೆ. ಹಾಗಾಗಿ ಆಳವಾದ ಸಂಶೋಧನೆಗಳು ನಡೆಯಬೇಕಾಗಿದೆ'

ಸಂಶೋಧನಾ ಪ್ರವೃತ್ತಿ ರುಕ್ಮಿಣೀಯಲ್ಲಿ ಹಾಸುಹೊಕ್ಕಾಗಿತ್ತು. ಒಂದರ್ಥದಲ್ಲಿ ಅನ್ನಿ ಬೆಸೆಂಟ್ ಅವರ ಮಾನಸ ಪುತ್ರಿಯೇ ಆಗಿಹೊಗಿದ್ದರು. ಕೇವಲ ಸಂಗೀತ, ನೃತ್ಯ ಕಲೆಗಳಷ್ಟೇ ಅಲ್ಲ ; ಭಾರತದ ಎಲ್ಲಾ ದೇಶೀಯ, ಸಾಂಪ್ರದಾಯಿಕ ಕಲೆಗಳು ಪುನರುಜ್ಜೀವನ ಕಾಣಬೇಕು ಎಂಬ ಧ್ಯೇಯ ಅವರದ್ದು. ಕಲೆಯ ಮೂಲಕ ದೇಶದ ಐಕ್ಯ ಎಂದರಿತಿದ್ದರು ಅರುಂಡೇಲ್. ಆದ್ದರಿಂದ 1937ರಲ್ಲಿಯೇ ಕಾರ್ಮಿಕ ಮತ್ತು ಕೈಗಾರಿಕಾ ಇಲಾಖೆಯ ಮೂಲಕ ನೇಯ್ಗೆ ಕೇಂದ್ರವನ್ನು ಸ್ಥಾಪಿಸಿ ಪುರಾತನ ಕಲೆಗೆ ಹೊಸ ಸ್ಪರ್ಶವನ್ನಿತ್ತರು. ಅವರ ಮುಂದಾಳತ್ವದಲ್ಲಿ ಬೆಳಕು ಕಂಡ ಕಲಾಕ್ಷೇತ್ರ ಸೀರೆ ಉದ್ಯಮ ಉತ್ತಮ ಅಭಿರುಚಿಯ, ಒಳ್ಳೆಯ ಗುಣಮಟ್ಟದ ವಸ್ತ್ರವಿನ್ಯಾಸಗಳಿಂದ ಶೋಭಿಸಿತು.

ಕುಟ್ರಾಲ ಕೊರವಂಜಿಯ ಅದ್ಭುತ ಯಶಸ್ಸಿನ ನಂತರದ ಅವರ ನೋಟ ಕಾಳಿದಾಸನ ಕುಮಾರಸಂಭವಂ. ಅದರಲ್ಲಿ ಸ್ವತಃ ರುಕ್ಮಿಣೀಯವರದ್ದೇ ನಾಯಕಿ ಪಾತ್ರ !

**(ಸಶೇಷ)**

## ಒಳನೋಟ

• 1 ಜುಲೈ : ಯಕ್ಷಗಾನ ಕಲಾರಂಗದ ವತಿಯಿಂದ ಶಿವರಾಮ ಜೋಗಿ ಅವರಿಗೆ ಬಿ.ವಿ. ಆಚಾರ್ಯ ಮತ್ತು ಕೊಗ್ಗ ಆಚಾರಿ ಅವರಿಗೆ ನಿಟ್ಟೂರು ಸುಂದರ ಶೆಟ್ಟಿ–ಮಹೇಶ್ ಶೆಟ್ಟಿ ಪ್ರಶಸ್ತಿ ಪ್ರದಾನ ಸಮಾರಂಭ ಮತ್ತು ಯಕ್ಷಗಾನ. ಸ್ಥಳ : ಪೂರ್ಣಪ್ರಜ್ಞ ಸಭಾಂಗಣ, ಉಡುಪಿ.

• 3 ಮತ್ತು 4 ಜುಲೈ : ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ ಆಯೋಜಕತ್ವದಲ್ಲಿ ಪ್ರಸಂಗ ರಚನಾ ಕಮ್ಮಟ. ಸ್ಥಳ : ರವೀಂದ್ರ ಮಂಟಪ, ಎಂಜಿಎಂ ಕಾಲೇಜು, ಉಡುಪಿ.

• 9th to 11th July: Shambhavi Dance Theatre organised Mohiniattam workshop by Padmashree Bharathi Shivaji, New Delhi and Mohiniattam recital on 11th July at Shambhavi Dance Theatre, Bangalore.

• 16th to 18th July: Natya festival organised by Shanthala Arts. On 16th Kathak Dance Performance by Shila Mehta, Bharatnatyam Dance by Prasanna Kasthuri and Vani Ganpathy at Chowdaiah memorial hall, Banglore ; on 17th Bharathanatyam Recitals by Disciples of Radha Shridhar and Shreedhar –Anuradha Shreedhar ; on 18th Odissi Recitals by Shantala dance Ensemble and Nrityagrama at ADA Rangamandira, Bangalore.

• 17 ಜುಲೈ : ಶ್ರೀ ಇಡಗುಂಜಿ ಮಹಾ ಗಣಪತಿ ಯಕ್ಷಗಾನ ಮಂಡಳಿ ಕೆರೆಮನೆ ಆಶ್ರಯದಲ್ಲಿ ಶ್ರೀಮಯ ಯಕ್ಷಗಾನ ತರಬೇತಿ ಕೇಂದ್ರ, ಕೆರೆಮನೆಯ ವಿಶೇಷ ತರಬೇತಿ (ಭಾಗವತಿಕೆ) ಮತ್ತು ಒಂದು ವರುಷದ ಗುರುಕುಲ ಪದ್ಧತಿಯ ತರಬೇತಿ ಕಾರ್ಯಕ್ರಮದ ಉದ್ಘಾಟನೆ. ಸ್ಥಳ : ಯಕ್ಷಗಾನ ಗುಣವಂತೆ.

• 24 ಜುಲೈ : ಭರತ ನೃತ್ಯ ಸಭಾದ ವತಿಯಿಂದ ಮಿರಿಯಾಮ್ ಲಮಾಸ್ ಬಯಾಯ್ಸೆಕ್ ಅವರ ಭರತನಾಟ್ಯ. ಮತ್ತು 28 ಆಗಸ್ಟ್ ರಂದು ಚೈತ್ರಾ ನಾಯಕ್ ಮತು ಚೈತನ್ಯ ನಾಯಕ್ ಅವರಿಂದ ಭರತನಾಟ್ಯ. ಸ್ಥಳ : ಪುರಭವನ, ಮಂಗಳೂರು.

• 25th July : 'Nritya Milana' - Bharatanatyam and Kuchipudi Jugalbandi performance by Anuradha Vikranth and Shama, as part of Ananya Kalotsava 2010. Place: Seva Sadana Auditorium, Malleswaram, Bangalore.

• 26 ಜುಲೈ : ಸನಾತನ ನಾಟ್ಯಾಲಯದ ವಿದ್ಯಾರ್ಥಿಗಳಿಂದ ನಾಟ್ಯಾಚಾರ್ಯ ಉಳ್ಳಾಲ ಮೋಹನ್ ಕುಮಾರ್ ಅವರಿಗೆ ಗುರುನಮನ ಮತ್ತು ನೃತ್ಯಗೀತ ಪ್ರದರ್ಶನ. ಸ್ಥಳ : ಸನಾತನ ನಾಟ್ಯಾಲಯ ಸಭಾಂಗಣ, ಮಂಗಳೂರು.

• 6th August : Parampara presented by Ms. Vyjayanthi Kashi & Prateeksha Kashi a Kuchipudi dance feature as part of Sharvan Mahothsav, Ujjain and Yavanika, State Youth Centre, Bangalore. 15th to 22nd August : As part of DANCE-INDIA, UK Vyjayanthi Kashi and Prateeksha Kashi present A Kuchipudi workshop and on 14th & 18th Kuchipudi Antharanga. 17th July : Vyjayanthi Kashi given a lecture demonstration in Kuchipudi to Vani School students, Basaveshwarnagar, Bangalore.

## ಚಂದಾ ವಿವರ

ಲಾಭಾಂಶದ ಬಗ್ಗೆ ಆಗ್ರಹವಿಲ್ಲದ ಪತ್ರಿಕೆಯ ಖರ್ಚು ವೆಚಗಳನ್ನು ಸರಿತೂಗಿಸುವುದು ಅಷ್ಟು ಸುಲಭದ ಮಾತಲ್ಲ ಎಂಬುದು ಆತ್ಮೀಯ ಓದುಗರಾದ ನಿಮಗೆ ತಿಳಿದೇ ಇದೆ. ಅಷ್ಟಕ್ಕೂ ಮೊದಲಿನಿಂದಲೂ ನೂಪುರ ಭ್ರಮರಿಗೆ ಚಂದಾ ವಿವರ ಕಡ್ಡಾಯವಲ್ಲ ಮತ್ತು ಓದುಗರ ಸಂಪರ್ಕಕ್ಕೆ ಅದೊಂದೇ ಮಾನದಂಡವೂ ಅಲ್ಲ. ಹಾಗಾಗಿ ಎಷ್ಟೋ ಬಾರಿ ಉಚಿತವಾಗಿಯೇ ಕಳಿಸಿಕೊಟ್ಟದ್ದಿದೆ. ಆದರೆ ಹೆಚ್ಚುತ್ತಿರುವ ಪ್ರಸರಣ ಸಂಖ್ಯೆ ಮತ್ತು ಖರ್ಚು–ವೆಚ್ಚಗಳನ್ನು ಗಮನಿಸಿದಾಗ ಮತ್ತು ಪ್ರಿಯ ಓದುಗರ ಅಪೇಕ್ಷೆಯಡಿಯಲ್ಲಿ ಚಂದಾವಿವರಗಳನ್ನು ಕೊಡುತ್ತಿದ್ದೇವೆ. ರಶೀದಿಯನ್ನು ಕಳಿಸಿಕೊಡಲಾಗುವುದು. ಈಗಾಗಲೇ ಸದಸ್ಯರಾದವರು ಇದನ್ನು ಪರಿಗಣಿಸಬೇಕಿಲ್ಲ. ಮೊತ್ತವನ್ನು ಕಳಿಸುವವರು ಮನಿಯಾರ್ಡರ್ ಅಥವಾ 'ಸಂಪಾದಕರು, ನೂಪುರ ಭ್ರಮರಿ' ಎಂಬ ಹೆಸರಿಗೆ ಡಿ.ಡಿ ಕಳಿಸುವುದು ಉತ್ತಮ. ಚೆಕ್ ಕಳಿಸುವುದಿದ್ದಲ್ಲಿ ಕಮಿಷನ್ ಮೊತ್ತ 40/– ರೂ ಸೇರಿಸಿ ಕಳಿಸುವುದು. ಸಹಕರಿಸಿ.

| | |
|---|---|
| ವಾರ್ಷಿಕ ಚಂದಾ : (ಅಂಚೆ ವೆಚ್ಚ ಸಹಿತ) | : ರೂ. 100/– |
| ಪೋಷಕ | : ರೂ. 1,000/– |
| ಮುದ್ರಣ ನಿಧಿ ( ಮಹಾಪೋಷಕ) | : ರೂ . 3,500/– |

ಚಂದಾ/ಪೋಷಕ/ಮಹಾಪೋಷಕ

.................................. ಸಾಲಿನ ಸದಸ್ಯನಾಗಲು / ಅಥವಾ ......................................................

.....ಈ ಸಾಲಿನಿಂದ ಪೋಷಕ/ ಮಹಾಪೋಷಕನಾಗಲು ಇಚ್ಚಿಸಿದ್ದು ಮೊತ್ತ ರೂ.....................

..........................................................................ಗಳನ್ನು ಎಂ.ಒ/ಡಿಡಿ ಮೂಲಕವಾಗಿ ...

..............................................ದಿನಾಂಕದಂದು ಕಳಿಸಿರುತ್ತೇನೆ.

ವಿಳಾಸ : .................................................................................................

..........................................................................................................................

..........................................................................................................................

ಸಹಿ/–

ನೂಪುರ ಭ್ರಮರಿಯ ಈ ಸಂಚಿಕೆ ನಿಮಗೆ ಉಚಿತ/ ಗೌರವ/ 2010ನೇ ಸದಸ್ಯ/ ಪೋಷಕ/ ಮಹಾಪೋಷಕ ಪ್ರತಿಯಾಗಿರುತ್ತದೆ. ನಿಮ್ಮ ಸದಸ್ಯತ್ವದ ನವೀಕರಣ ಶಾಶ್ವತ/............................ ............ದಂದು ಮಾಡಬೇಕಾಗಿರುತ್ತದೆ.

## ನಮ್ಮ ಬಳಗಕ್ಕೆ ಮತ್ತಷ್ಟು ಹಿರಿಯರು

- **ವಿದ್ವಾನ್ ಜನಾರ್ಧನ್,** 'ನಾಟ್ಯತರಂಗ', ನೂಪುರ ನಿನಾದ, ಶ್ರೀನಗರ, ಸಾಗರ.
- **ಭಾರತೀಯ ಭಾಷಾ ಸಂಸ್ಥಾನ, ಮಾನಸಗಂಗೋತ್ರಿ, ಮೈಸೂರು.**
- **ವಿದುಷಿ ಉಷಾ ಈಶ್ವರ ಭಟ್,** ಶ್ರೀ ಗೋಪಾಲಕೃಷ್ಣ ಸಂಗೀತ ಶಾಲೆ, ವಿದ್ಯಾನಗರ, ಕಾಸರಗೋಡು

**ಪತ್ರಿಕೆಯ ಬಳಗದವರಾಗಿ ಜಿಲ್ಲಾ ಕೇಂದ್ರಗಳಲ್ಲಿ ಮೇಲ್ವಿಚಾರಣೆಯನ್ನು ನಿರ್ವಹಿಸುವವರ ಹೆಸರುಗಳು ಕೆಳಗಿನಂತಿವೆ. ಆಸಕ್ತ ಓದುಗ, ಕಲಾವಿದರು ಕೆಳಕಂಡವರನ್ನು ಸಂಪರ್ಕಿಸಿ ಪತ್ರಿಕೆಯ ಚಂದಾದಾರರಾಗಬಹುದು ; ಮುದ್ರಣ ನಿಧಿಗೆ ಸಹಕರಿಸಬಹುದು ; ಪತ್ರಿಕೆ ಮತ್ತು ಕಾರ್ಯಕ್ರಮಗಳ ಪ್ರಾಯೋಜಕತ್ವ ವಹಿಸಿಕೊಳ್ಳಬಹುದು ; ಹೆಸರು ನೋಂದಾಯಿಸಿ ಬಳಗದವರಾಗಬಹುದು.**

**ವಿಷ್ಣುಪ್ರಸಾದ್ ನಿಡ್ಡಾಜೆ,** ಪ್ರಸರಣಾಧಿಕಾರಿ ( ಮೊಬೈಲ್ : 94817 65544)
**ಎನ್. ರಾಮ ಭಟ್,** ಉಡುಪಿ (ಮೊಬೈಲ್ : 92414 42833)
ಸಿ. **ಎಸ್. ರಾಮಚಂದ್ರ ಹೆಗಡೆ,** ಬೆಂಗಳೂರು. ( ಮೊಬೈಲ್ : 99863 72503)
**ಪ್ರೊ. ವೆಂಕಟೇಶ್ ಪೈ,** ಮುಂಬೈ. ( ಮೊಬೈಲ್ : 098699 21397)
**ಬಿ.ಜಿ. ನಾರಾಯಣ ಭಟ್,** ಮಡಿಕೇರಿ ( ಫೋನ್ : 08272–222709)

**ನೂಪುರ ಭ್ರಮರಿಯ ಬಳಗವು**
**ಭರತನಾಟ್ಯ, ಮತ್ತು ನೃತ್ಯ ಶೈಲಿಗಳಿಗೆ ಸಂಬಂಧಿಸಿದಂತೆ ಅರಿವಿನ ವಿಸ್ತರಣೆಗಾಗಿ**

1. ಭಾರತೀಯ ಶಾಸ್ತ್ರೀಯ ನೃತ್ಯಗಳು ಮತ್ತು ಜೀವನಾನುಸಂಧಾನ
2. ಭರತನಾಟ್ಯದ ಆಂಗಿಕಾಭಿನಯ
3. ನಾಯಿಕಾ–ನಾಯಕಾ ಭಾವ
4. ಹಸ್ತಮುದ್ರಾ ವಿನ್ಯಾಸಗಳು ಮತ್ತು ಸಂಶೋಧನೆ
5. ನೃತ್ಯ ಇತಿಹಾಸ ಮತ್ತು ಪುನರುತ್ಥಾನ
6. ನೃತ್ಯ ಗ್ರಂಥಗಳು ಮತ್ತು ಅವುಗಳೆಡೆಗೆ ಸಮಗ್ರ ದೃಷ್ಟಿ

**ಮೇಲ್ಕಂಡ ವಿಚಾರಗಳನ್ನು ಒಳಗೊಂಡಂತೆ ವಿವಿಧ ವಿಷಯಗಳಲ್ಲಿ ಉಪನ್ಯಾಸ– ಪ್ರಾತ್ಯಕ್ಷಿಕೆಗಳನ್ನು ನೀಡುತ್ತಾ ಬಂದಿದ್ದು ; ಕಾರ್ಯಕ್ರಮಗಳಿಗಾಗಿ ಆಸಕ್ತರು/ಸಂಸ್ಥೆಗಳು ಪತ್ರಿಕೆಯ ಸಂಪಾದಕರನ್ನು ಸಂಪರ್ಕಿಸಬಹುದು.**
**ದೂ : 99641 40927**




If not delivered please return to :
ನೂಪುರ ಭ್ರಮರಿ
'ಸಾನ್ನಿಧ್ಯ' ಪ್ರಕಾಶನ
ದೇಚೂರು ರಸ್ತೆ,
ಅಶ್ವತ್ಥಕಟ್ಟೆ ಸಮೀಪ
ಮಡಿಕೇರಿ, ಕೊಡಗು– 571201





ಫೋನ್ ನಂ : 9964140927
ವೆಬ್ ಸೈಟ್ :
www.noopurabhramari.com
ಈ ಮೈಲ್ ವಿಳಾಸ :
feedback@noopurabhramari.com
editor@ noopurabhramari.com